Motion to pass.

Sri B. D. JATTI.—I move:

" That the Mysore Appropriation (No. 6) Bill, 1962 be passed."

MR. SPEAKER—The question is:

" That the Mysore Appropriation (No. 6) Bill, 1962 be passed."

The motion was adopted.

THE MYSORE LAND REVENUE [Surcharge] (Amendment) BILL, 1962.

(Debate Continued).

Sri K. LAKKAPPA (Hebbur).—I raised a point of order on Saturday.

MR. SPEAKER.—I think that the Presiding Officer has given a ruling on that day.

Sri K. LAKKAPPA.—Sri Annarao Ganamukhi who has then in the Chair told me that he will consider. No ruling was given.

MR. SPEAKER.—What is the point of order that you have raised and on which, ruling is to be given?

Sri K. LAKKAPPA.—The point is whether I may be allowed to speak on the Bill again in support of the amendment?

MR. SPEAKER.—You want to know whether you can be given a second chance. I learn that a ruling has been given.

Sri V. M. DEO (Gubbi).—When you were here, the Leader of the Opposition was moving the amendment and I heard you say that he was just moving the motion and not speaking on the main motion. In other words I take it by implication that you already gave a ruling that he was just moving the motion and that debate will start later on. But, Sri Anna Rao Ganamukhi when he was in the Chair seems to have given a contradictory ruling.

MR. SPEAKER.—At the time when Sri S. Sivappa gave an oral notice saying that the Bill be circulated, I said, on the objections raised by the Minister for Revenue, that the Hon'ble Member had given the notice a little late and that the motion had already been put before the House. I said that he could move it. I permitted him and I circulated the amendment and he moved it. Afterwards it was put to the House for discussion and I discretely said that both the main motion and the amendment were before the House and that the debate would proceed on both. One or two members thought, as I could infer from the scope of the discussion in the House, that it was only the amendment that was being discussed. Evidently they thought that the main motion could not be considered if the amendment was allowed. That is an erroneous impression. Normally the time is to be utilised to the advantage of the House, there should be no duplication of the work. If there is any rule with regard to identical question, namely, where a motion has been moved for the second reading and the amendment is made by any member that it should be circulated, then the scope of the debate is identically same, rule 73(3) says.—

" On the day on which any motion that the bill be taken into consideration by the Assembly either at once or at some future day is moved, the principal of the bill and its general provisions may be discussed, but the details of the bill shall not be discussed further than is necessary to explain its principles."

I heard somebody say that the rule should be suspended. Nobody has made a motion for suspension. When I was presiding if I had by implication ruled that the rule be suspended, it might have been unfair. Since then, I have read a number of books on this subject. The scope of the debate particularly with regard to anciliary amendments and all that I have read, I may mention to the House that there are series of amendments that are put. Though at the time of voting, we may put them separately, the scope for the debate is the same. There has been a *bona fide* error and I find some members anxious to know how it should be set right. I once gave a ruling on a request made by Sri S. Sivappa, I sent him a number of books and the rulings to say that a member who has participated in the debate can not be given a second chance unless it be in the case of a mover having the right of reply, and any personel explanation with regard to anything that transpires during the debate. Barring these two things, there is no chance for a second time for members to speak. I am thinking how best I can help the Member. I suggest that those members who have thought on these premises may ask for clarifications. I will be very indulgent when members ask for clarifications. Of course, rules do not permit any member to participate again. But I will permit members to seek clarifications liberally.

SRI ANNA RAO GANAMUKHI (Afzalpur).—Sir, the other day on this point I opined when I was on the Chair that some members were under the misapprehension that the scope of the bill was only to speak about the amendment to the original motion. Therefore there is limited discussion only to the extent of amendment. They wanted an opportunity to speak on the principles of the bill but they could not express anything. Therefore I said that to that extent we will consider the point.

MR. SPEAKER.—I have said and given ruling that the Chair will have no right to permit any member to speak for the second time. Therefore we will set matters right by permitting clarifications very liberally. The time fixed for this bill by the business Advisory Committee is 3½ hours. I will extend it by 1½ hours by my own right. Now Sri Bheemanna will continue.

Member spoke in Hindustani and an English version given by him is reproduced below.

SRI S. BHEEMANNA (Bhalki).—Sir, while speaking about the object and reasons of this bill, the Minister for Revenue has said that the Government is very reluctant in approaching the agriculturists for this levy. He could not find other means to collect the money. This bill has been prepared for levy of cent per cent surcharge upon the Revenue assessment, and it is quite unjustifiable and undemocratic and it goes against the very spirit of Socialistic Pattern of Society. This attitude of the Government shows "Andheer Nagri Chowpat Raj" of this Government.

Coming to the main point, I would refer to the two classes in the State for administrative purposes—one is the Government and the other is Public. Every Government which intends to impose the burden of various taxes upon the public, it is its honest duty to check up first, the responsibilties of the Government towards the public and the public facilities. If the Government failed to do its duty, it should not impose the heavy taxes.

Coming to the hardships of the agriculturists, I would refer that 80% of the population of our State

(Sri S. BHEEMANNA)

is engaged in agriculture. The burden of several taxes imposed by the Government directly or indirectly, is upon the shoulder of the agriculturists. It is a poorer class in our society against other sections such as merchants, millioners, upper class Government servants etc. Proportionally the taxes imposed on the kisans are very high. An ordinary kisan cannot maintain his family peacefully now-a-days. He cannot get the facilities for even lower education for his children, whereas the other sections can get it easily.

The hardship of the kisans in Hyderabad-Karnatak Area are too many and their irreparable losses are due to the deliberate neglegence of Government. Most of the Hyderabad-Karnatak Area was under the administration of "*Jagir and Paiga*" in the Nizam State. The Revenue assessment of that area was very high as to the extent of Rs. 15 to Rs. 30 per acre. After abolition of the Jagir and Paiga in 1950, the farmers struggled and represented these grievances to the then Hyderabad Government by proceeding to the capital city Hyderabad in a huge procession. On account of this strong reprsentation, the then Government realised the hardships and ordered to suspend the Revene assessment at the rate of 25% to 50% at once, and promised to dispense with the other fifty per cent of the Revenue assessment.

Since 1952, twenty five per cent (25%) to fifty per cent (50%) of the aforesaid Revenue assessment was suspended but not suspended totally. The concerned Dy. Commissioner has recommended the case to the Government but the Government took no heed to consider it and the case is pending unnecessarily till to-day without taking any decision.

As the result of enforcement of Hyderabad Inam Abolition Act, the tenant were put to great hardships. Thousands of acres of Inam land which is under the direct cultivation of the tenants. Hundreds of Inamdars leased out the lands to the tenants and got full consideration of the said lands from them in the shape of "*Nazranna*" because the Inami lands were not transferable at that time.

Our welfare Government enacted the Land Revenue Surchage Act. According to the Act, the poor tenant has to pay forty per cent (40%) more of the total amount of compensation to the Inamdar, which was paid to him by the tenant at the time of lease agreement before the enforcement of the Act. Besides this tyranny made by the Government against the Fundamental Rights of the citizens, the Government Officers like Deputy Commissioners for Inam etc., are calculating the said suspended Revenue assessment to fix up the compensation to be paid to the Inamdars. As the result, it is apparant that a Inamdar is going to get cent per cent more compensation than what he was entitled to as per rule, which is a great hardship.

If an Inamdar was getting the sum of Rs. 5,000 as a "*Rusoom*" Inam, he will get Rs. 100 as yearly interest depositing it in the Bank. Thus the Inamdars have become the recognised Permanent Inamdars. Is it Democracy ? Is it a Socialistic Pattern of Society ? Is it a Welfare State ? Is it your Ramraj ? Consider this matter seriously and ask your conscience that whether you are entitled to or have any right to move this type of Land Revenue Surcharge (Amendment) Bill ?

Inamdars are the same Inamdars whose ancestors had helped the invaders, from outside and snatched our independency. The Nizam of

(Sri S. BHEEMANNA)

Hyderabad helped the British in war against Tipu Sultan of Mysore and the other Indian States in result he became the "*Yar-e-Wafadar*" meaning the honest friend of the British Government. He got a *Kitab* of *Prince of Berar*. In the same manner the Inamdars helped Asfzha the Ist in conquering our country and got the lands in the form of Inam.

I ask our Government not to pay heavy amounts to the traitors of the country. But such heavy amounts should be obtained for them for the National Defence of our Country and for the completion the IIIrd Five Year plan. New taxes of surcharge etc., should not be imposed upon the poor agriculturists who are the pillars of our country and on whom the whole edifice of the country stands.

MR. SPEAKER.—Sir, according to the statement of Revenue Minister, it is intended to impose surcharge tax only for two years, without exempting the poor kisans. As you know this year the most of the agricultural produce is damaged and affected badly throughout the state due to the heavy floods and rains. In view of the scarcity conditions is it not the duty of the Government not to take a single naya Paise towards the Revenue assessment from the poor agriculturists? But the Government intends to impose hundred per cent of Revenue assessment in the shape of Land Revenue surcharge tax. When a drafted Land Revenue Code is introduced and discussed during this Sessions or the next, what is the validity of the Land Revenue Surcharge (amendment) Bill, which will bring hardships to poor kisans? Moreover it will take a lot of time and money of the Government in preparing a list, collect the money attaching the property of the poor.

No doubt that we are in need of money for the completion of the IIIrd Five Year plan and also to meet the Emergency condition of our country. But in the name of emergency one cannot disturb the poor kisans of the country, and leave away the Millioners, Inamdars, big Merchants, State Officers and other authorities about whom the Hon'ble Members of this House have drawn the attention of the Government on this floor.

At the end, I request Government through you, Sir:

(*a*) the Mysore Land Revenue Surcharge Bill of 1962, will be taken back and withdrawn:

(*b*) the suspended Revenue amount of the Jagir and Paiga area mentioned above, be removed from the Revenue records:

(*c*) a circular be issued to the Deputy Commissioners of Inam and the concerned authorities to fix the compensation or the premium under the Hyderabad Inam Abolition Act, 1955, on the actual payment of the Revenue Assessment by the tenant to the Government as in existence;

(*d*) the survey, and re-settlement be completed as early as possible throughout the state and the rate of Revenue assessment re-fixed up fairly.

[MR. DEPUTY SPEAKER in the Chair].

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಸಭಾಪತಿಗಳೆ, ಈ ದಿವಸ ಇಲ್ಲಿ ಮಂಡಿಸಿರತಕ್ಕ ಮಸೂದೆಯನ್ನು ನೋಡಿದರೆ, ರೈತರು ಈ ಹೊರೆಯನ್ನು ಹೊರುವುದಕ್ಕೆ ತಕ್ಕಷ್ಟು ದಷ್ಟಪುಷ್ಟರಾಗಿದ್ದಾರೆ, ಇಲ್ಲವೆಂಬುದನ್ನು ಮಾನ್ಯ ಮಂತ್ರಿಗಳು ನೋಡಿಲ್ಲವೆಂಬುದು ವ್ಯಕ್ತವಾಗುತ್ತದೆ. ಈ ಐದು ಕೋಟಿ ರೂಪಾಯಿ ಹಳ್ಳಿಗಳ ರೈತರ ಮೇಲೆ ಬೀಳುತ್ತದೆ. ಈಗಾಗಲೇ ಹಳ್ಳಿಗಳಿಗೆ ಸ್ಕೂಲು ಬೇಕಾದರೆ, ಆಸ್ಪತ್ರೆ ಬೇಕಾದರೆ, ರಸ್ತೆ ಬೇಕಾದರೆ, ಬಾವಿ ಬೇಕಾದರೆ, ಜನರು ಕೋಟ ಕೊಡಬೇಕೆಂದು ಹೇಳಿ ಅವರು ಅನೇಕ ವಿಧಗಳಲ್ಲಿ ತೆರಿಗೆಗಳನ್ನು ತೆರುತ್ತಿದ್ದಾರೆ. ಆದರೆ ನಗರಗಳಲ್ಲಿ ಇಂಥಾ ಯಾವು ದಕ್ಕೂ ಜನರ ಕೋಟಾ ಕೊಡಬೇಕೆಂದು ಕೇಳಿ

(ಶ್ರೀ ಎನ್. ನಂಜೇಗೌಡ)

ಅವರ ಮೇಲೆ ಹಾಕುತ್ತಿಲ್ಲ. ಅವರು ಕೊಡುತ್ತಲೂ ಇಲ್ಲ. ಹಾಗೆ ಅವರನ್ನು ಬಿಟ್ಟು ರೈತರ ಮೇಲೆ ಈ ತೆರಿಗೆ ಹಾಕುವುದು ನ್ಯಾಯವಲ್ಲವೆಂದು ಹೇಳುತ್ತೇನೆ. ರೈತ ದಷ್ಟ ಪುಷ್ಟವಾಗಿ ಬೆಳೆಯಬೇಕು, ರೈತ ದೇಶದ ಬೆನ್ನು ಮೂಳೆ ಎಂದು ಎಲ್ಲರೂ ಹೇಳುತ್ತಿದ್ದೇವೆ. ಆದರೆ ಹೀಗೆ ಸರ್‌ಚಾರ್ಜ್ ವಿಧಿಸಿದರೆ ಅವನ ಬೆನ್ನು ಮೂಳೆ ಬೆಳೆಯುವುದಿಲ್ಲ, ಮುರಿಯುತ್ತದೆ. ಆದುದರಿಂದ ಇದನ್ನು ವಾಪಸು ತೆಗೆದುಕೊಂಡು, ಕಾಲಾವಕಾಶಕೊಡಬೇಕೆಂದು ಕೇಳುತ್ತಿರುವುದು.

ಮಂಡ್ಯ ತಾಲ್ಲೂಕಿಗೆ ಪ್ಯಾಕೇಜ್ ಕಾರ್ಯಕ್ರಮವೆಂದು ಜಾರಿಗೆ ಬಂದಿದೆ. ಒಂದು ತರಿ ಫಸಲು ಮಾಡಬೇಕಾದರೆ ಎಕರೆಗೆ ಸರ್ಕಾರಕ್ಕೆ 300 ರೂಪಾಯಿ ಖರ್ಚಾಗುತ್ತದೆ............

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸ್ವಾಮಿ, ನಾವು ಸದಸ್ಯರು ಕಷ್ಟ ಪಟ್ಟು ಮಾತನಾಡುತ್ತಿರುವಾಗ ಸಂಬಂಧಪಟ್ಟ ಮಂತ್ರಿಗಳು ಎರಡು ಮೂರು ಜನರೊಡನೆ ಯಾವುದೋ ಮಾತಾಡುತ್ತಿದ್ದರೆ, ನಾವು ಹೇಳುವುದರ ಪ್ರಯೋಜನವಾದರೂ ಏನು? ಇದೇ ನನ್ನ point of order.

MR. DEPUTY SPEAKER.—There is no point of order.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಹೇಳುತ್ತಿರುವುದನ್ನೂ ನಾನು ಕೇಳುತ್ತಿದ್ದೇನೆ, ಬೇಕಾದರೆ ಅದನ್ನು ಪದಶಃ ಹೇಳುತ್ತೇನೆ. ಶಾಸನ ಸಭೆಯ ಸದಸ್ಯನಾಗಿ 18 ವರ್ಷಗಳ ಅನುಭವವಿದೆ. ಮಾನ್ಯ ಸದಸ್ಯರು ಹೇಳಿದುದನ್ನು ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಎನ್. ನಂಜೇಗೌಡ.–ಪ್ಯಾಕೇಜ್ ಪ್ಲ್ಯಾನ್ ಪ್ರಕಾರ ಬೀಜ ಹಾಕಿದ ಲಾಗಾಯಿತು ನಾಟಿಯ ವರೆಗೆ ಕೇವಲ ಒಂದೂವರೆ ತಿಂಗಳಲ್ಲಿ 300 ರೂಪಾಯಿ ತರಿ ಬೆಳೆಗೆ ಖರ್ಚಾಗುತ್ತದೆ. ಖುಷ್ಕಿ ಬೆಳೆ ಬೆಳೆಯಬೇಕಾದರೆ 100 ರೂಪಾಯಿ ಖರ್ಚಾಗುತ್ತದೆ. ಹೀಗೆ ಕೇವಲ ಒಂದೂವರೆ ತಿಂಗಳಿಗೆ ಇಷ್ಟು ಖರ್ಚಾದರೆ ಇನ್ನು ಮಿಕ್ಕ ಕಾಲದಲ್ಲಿ ರೈತರು ಹೇಗೆ ಜೀವನ ಮಾಡುವುದು? ರೈತರಿಗೆ ಖರ್ಚು ಕಳೆದು ಜೀವನ ಮಾಡಲು ಸಾಕಷ್ಟು ಉಳಿಯುತ್ತದೆಯೇ ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಹೀಗೆ ಮಾಡದೆ ರೈತರು ಏನು ಕೇಳಿದರೂ ತಂಟೆ ಮಾಡದೆ ಕೊಟ್ಟುಬಿಡುತ್ತಾರೆಂದು, ಅವರ ಮೇಲೆ ಭಾರ ಹೇರುವುದು ಸರಿಯಲ್ಲ. ಭಾರ ಹೊರಬಲ್ಲವರು ಬೇರೆ ಇದ್ದಾರೆ, ಅವರ ಮೇಲೆ ಹೇರಲಿ. ಆದರೆ ರೈತ ಬಹಳ ಬಡತನದಲ್ಲಿದ್ದಾನೆ. ಅವನ ಉತ್ಪತ್ತಿ ಕೇವಲ ಝೂಡಮಾಲಿಯಷ್ಟೂ ಇಲ್ಲ. ಅಷ್ಟು ಕೆಳಮಟ್ಟದಲ್ಲಿ ಜೀವನ ನಡೆಸುತ್ತಿದ್ದಾನೆ. ಮಂತ್ರಿಗಳೇ ಹೇಳಲಿ. ಇಷ್ಟು ಧಾರಣೆಗಳು ಏರಿದ್ದರೂ ರೈತ ದಷ್ಟ ಪುಷ್ಟವಾಗಿ ಬೆಳೆದಿದ್ದಾನೆಯೇ, ಅವನಲ್ಲಿ ಹಣವಿದೆಯೇ ಎಂಬುದನ್ನು, ರೈತನ ಕಷ್ಟ ಸುಖಗಳನ್ನು ಅವರು ಕಂಡಿದ್ದಾರೆ. ಏನೋ ಗ್ರಹಚಾರ ವಶಾತ್ ಅವರೂ ರೈತರಾಗಿ ಹುಟ್ಟಿ ಅವರ ಭಾಗಕ್ಕೆ ಈ ಮಸೂದೆಯನ್ನು ಮಂಡಿಸುವ ಕೆಲಸ ಬಂದಿದೆ. ಇದಕ್ಕಾಗಿ ವ್ಯಥೆಪಡಬೇಕಾಗಿದೆ. ನಮ್ಮ ಪೂರ್ವಿಕರು ಒಂದು ಮಾತು ಹೇಳುತ್ತಿದ್ದರು. 'ರಾಜನ ದೃಷ್ಟಿ ಭೂಮಿಯ ಮೇಲೆ, ರೈತನ ಮೇಲೆ ಬೀಳಬಾರದೆಂದು' ಹೇಳುತ್ತಿದ್ದರು. ಈಗ ಇವರ ದೃಷ್ಟಿ ಬಿದ್ದುದರಿಂದ ರೈತ ಹಿಂದೆ ಹೋಗುತ್ತಿದ್ದಾನೋ ಏನೊ ಎನಿಸುತ್ತದೆ. ಈಗ ಕಂದಾಯದ ಸರ್‌ಚಾರ್ಜ್ ಎಷ್ಟು ಕೊಡುತ್ತಿದ್ದಾರೋ ರೈತರು ಅದಕ್ಕೆ ಎರಡರಷ್ಟು ಕೊಡಬೇಕಾಗುತ್ತದೆ. ಮೈಸೂರಿನಲ್ಲಿ ಒಂದು ದರ, ಬೊಂಬಾಯಿಯ ಪ್ರದೇಶದಲ್ಲಿ ಒಂದು, ಹೈದರಾಬಾದು ಪ್ರದೇಶದಲ್ಲಿ ಒಂದು ದರವಿದೆ. ಇಲ್ಲಿ ಒಂದೂವರೆ ಆಣೆ ಇರುವುದು ಮೂರಾಣೆಯಾಗುತ್ತದೆ, ಒಂದು ರೂಪಾಯಿ ಇರುವುದು ಎರಡು ರೂಪಾಯಿ ಆಗುತ್ತದೆ, ಮೂರು ರೂಪಾಯಿ ಇದ್ದರೆ ಆರು ರೂಪಾಯಿ ಆಗುತ್ತದೆ. ಇದು ನ್ಯಾಯವಲ್ಲ. ಇದನ್ನು ವಿಮರ್ಶೆ ಮಾಡಿ, ಹೇಗೆ ತರಬೇಕೆಂಬ ಬಗ್ಗೆ ವಿಮರ್ಶಿಸಲು ಕಾಲಾವಕಾಶ ತೆಗೆದುಕೊಂಡು, ಈ ಮಸೂದೆಯನ್ನು ಪುನಃ ಪರಿಶೀಲನೆ ಮಾಡಿ ಮುಂದಿನ ಅಧಿವೇಶನದಲ್ಲಿ ಮಂಡಿಸುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಗಂಗಾದರ ನಾಮೋಷಿ (ಗುಲ್ಬರ್ಗ).–ಸ್ವಾಮಿ, ಅಧ್ಯಕ್ಷರೆ, ಈ ಮಸೂದೆಯನ್ನು ನಾನು ಸರ್ವತ್ರ ವಿರೋಧಿಸುತ್ತೇನೆ. ಈ ಸಮಯದಲ್ಲಿ ಚೀಣೀಯರು ಆಕ್ರಮಣ ಮಾಡುತ್ತಿದ್ದಾರೆ. ನಮ್ಮ ಯೋಜನೆಗಳನ್ನು ಪೂರ್ಣ ಮಾಡಲು ಸಾಕಷ್ಟು ಹಣಬೇಕು. ಮಿಲಿಟರಿ ಸಾಧ್ಯತೆಗಳಾಗಬೇಕು, ಇದಕ್ಕೂ ಹಣಬೇಕು. ಆದರೆ ಇದನ್ನೆಲ್ಲಾ ಕೇಳುವ ಕಾಲಕ್ಕೆ ಈ ಹಣವನ್ನು ಯಾರಿಂದ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಬೇಕು.

ಎಮ್ಮೆಯ ಮೊಲೆಯಲ್ಲಿ ಹಾಲು ಹಿಂಡಿದ ಒಳ್ಳೆರೆಯದು. ಅದು ಬಿಟ್ಟು ಕೋಣದ ಹತ್ತಿರ ಹೋಗಿ ಹಾಲು ಹಿಂಡುತ್ತಾರೆ ಎನಿಸುತ್ತದೆ. ಒಕ್ಕಲಿಗರ ಮನೆತನದಲ್ಲಿ ಹುಟ್ಟಿ ಒಕ್ಕಲಿಗರಿಗೆ ಸಹಾಯ ಮಾಡುವುದಕ್ಕೆ ಬದಲಾಗಿ ಒಕ್ಕಲಿಗರಿಗೆ ಕಷ್ಟವನ್ನು ಕೊಡುತ್ತಿದ್ದೇನೆ, ಅವರ ಮೇಲೆ ತೆರಿಗೆಯನ್ನು ಹಾಕುತ್ತಿದ್ದೇನೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು. ಅವರು ಒಕ್ಕಲುತನವನ್ನು ಮಾಡುವುದು ಬಿಟ್ಟು ಬಹಳ ದಿವಸವಾಗಿದೆಯೆಂದು ಕಾಣುತ್ತದೆ. ಅವರು ಈಗ 11 ವರ್ಷಗಳಿಂ ದಡೆಲ್ಲಿಯಲ್ಲಿ ಸುತ್ತಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಈಗ ಅವರಿಗೆ ಒಕ್ಕಲಿಗರ ಪರಿಸ್ಥಿತಿ ಗುರುತು ಇದೆಯೋ ಅಥವಾ ಇಲ್ಲವೋ ಎಂದು ಸ್ವಲ್ಪ ಸಂಶಯ ಬರುತ್ತದೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಹೇಳಿದರು, 'ಟೀ ಪ್ಲಾಂಟೇಷನ್ನಿಗೆ ಒಂದು ಎಕರೆಗೆ $1\frac{1}{2}$ ರೂಪಾಯಿ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಹಾಕಿದ್ದಾರೆ' ಎಂದು. ಟೀ ಪ್ಲಾಂಟೇಷನ್‌ನವರಿಗೆ ತುಂಬಾ ಲಾಭ ಬರುತ್ತದೆ. ಆದ್ದರಿಂದ ಅವರಿಗೆ 4 ಪಟ್ಟು ಹಾಕಿದರೂ ಪರವಾಯಿಲ್ಲ. ಈ ಸಭೆಗೆ ಪ್ರತಿನಿಧಿಗಳಾಗಿ ಬಂದಿರತಕ್ಕ ಮಾನ್ಯ ಸದಸ್ಯರ ಪೈಕಿ ಬಹಳ ಮಂದಿ ಸದಸ್ಯರು ಹಳ್ಳಿಯಿಂದ ಬಂದು ಒಕ್ಕಲಿಗರ ಪ್ರತಿನಿಧಿಗಳಾಗಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—"ವಕ್ಕಲಿಗರು" ಎಂದರೆ ಹಳೆಯ ಮೈಸೂರಿನಲ್ಲಿ ಒಂದು ಕೋಮು ಆಗುತ್ತದೆ.

ಶ್ರೀ ಗಂಗಾಧರ ನಾಮೋಶಿ.—ಎಮ್ಮೆ ಕೋಣ ಎಲ್ಲಾ ಒಂದೇ ಎಂದು ತಿಳಿದುಕೊಂಡು ಕೋಣ ನಲ್ಲಿ ಹಾಲು ಹಿಂಡುವುದಕ್ಕೆ ಬಂದಿದ್ದಾರೆ. ದಯ ವಿಟ್ಟು ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಕಣ್ಣು ಮುಚ್ಚಿಕೊಂಡು ಈ ತೆರಿಗೆ ಯನ್ನು ಹಾಕುವುದಕ್ಕೆ ಹೊರಟಿದ್ದಾರೆ, ಅದು ತಪ್ಪು. ಹೈದರಾಬಾದ್ ಕರ್ನಾಟಕದ ವಿಚಾರದಲ್ಲಿ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರೊಬ್ಬರು ಈಗತಾನೆ ಹೇಳಿದರು. ಹೈದರಾಬಾದ್ ಕರ್ನಾಟಕದಲ್ಲಿ ಈಗ ಎಷ್ಟೋ ಕಂದಾಯವನ್ನು ರೈತರು ಕೊಡುತ್ತಿದ್ದಾರೆ. ಆದರೆ ಅವರಿಗೆ ಯಾವ ತರದ ಸೌಲಭ್ಯವೂ ಇಲ್ಲ. ನೀರಿನ ಸೌಲಭ್ಯ ಇಲ್ಲ. ಗೊಬ್ಬರ ಸಿಕ್ಕುವುದಿಲ್ಲ. 50—100 ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕ ವಕ್ಕಲಿಗರಿಗೂ ಕೂಡ ತಿನ್ನುವುದಕ್ಕೆ ಹೊಟ್ಟೆ ತುಂಬ ಅನ್ನವಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದರೆ ಅವರಿಗೆ ಸಾಧ್ಯವಿಲ್ಲ. ಇಂಥಾ ಕಾಲದಲ್ಲಿ ಚೀನೀಯರು ನಮ್ಮ ದೇಶದ ಮೇಲೆ ಮಾಡಿರತಕ್ಕ ಆಕ್ರಮಣಕ್ಕೆ ನಮಗೆ ಸೈನಿಕರು ಬೇಕು. ಮಂತ್ರಿಗಳ ಮಕ್ಕಳು ಯಾರೇ ಆಗಲೀ ಸೈನಿಕರಾಗಿ ರಿಕ್ರೂಟ್ ಆದದ್ದನ್ನು ನಾನು ಎಲ್ಲೂ ಕೇಳಲಿಲ್ಲ. ಒಂದು ವೇಳೆ ಅವರಿಗೆ ಸಂಬಂಧಪಟ್ಟವರು ಯಾರಾದರೂ ಇದ್ದರೆ, ಅವರು ಮೇಜರ್ ಜನರಲ್ಲೋ ಅಥವಾ ಕಮ್ಯಾಂಡರೋ ಆಗಿದ್ದು ಸೈನಿಕರಿಗೆ ಆರ್ಡರ್ ಕೊಟ್ಟು ಹಿಂದೆ ಅವಿತುಕೊಳ್ಳತಕ್ಕ ಒಬ್ಬಿಬ್ಬರು ಇರಬಹುದು. ವಕ್ಕಲಿಗರು ದಷ್ಟಪುಷ್ಟರಾಗಿ, ಶಕ್ತಿವಂತರಾಗಿ ಆಗಬೇಕಾದರೆ, ಒಳ್ಳೆ ರೀತಿಯಿಂದ ಊಟ ಮಾಡಿ, ಅಭ್ಯಾಸ ಮಾಡಿ, ದೇಶ ರಕ್ಷಣೆಯನ್ನು ಮಾಡುವ ಭಾವನೆ ಅವರಿಗೆ ಬರಬೇಕಾದರೆ, ಬಡ ರೈತರ ಮೇಲೆ ಈ ತರಹ ಸರ್‌ಛಾರ್ಜ್ ಹಾಕಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೂ ಮೊದಲು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಂತು. ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವ ವಿಷಯದಲ್ಲಿ ಎ. ಜಿ. ರಾಮಚಂದ್ರರಾಯರ ಕಮಿಟಿಯವರು ಮಾಡಿರುವ ಶಿಫಾರಸ್ಸಿಗಿಂತ ಕಡಿಮೆಯಾಗಿ ಮಾಡಿದರೂ, ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ಎಷ್ಟು ವ್ಯತ್ಯಾಸ ಇದೆ ಯೆಂಬುದನ್ನು ನೋಡಬೇಕು. ಈ ದೇಶದಲ್ಲಿರತಕ್ಕ ನಾವೆಲ್ಲರೂ ಒಂದೆ. ಲಾಯರುಗಳು, ಬೇರೆ ಬೇರೆ ವ್ಯಾಪಾರಸ್ಥರು, ಮತ್ತೆ ಸರ್ಕಾರಿ ಆಫೀಸುಗಳಲ್ಲಿ ಕೆಲಸ ಮಾಡುವವರು ಅವರವರ ಉತ್ಪನ್ನಗಳಿಗೆ ಅನುಸರಿಸಿ ಒಂದೇ ಸಮನಾಗಿ ಇನ್‌ಕಂಟ್ಯಾಕ್ಸ್ ಕೊಡುತ್ತಿದ್ದಾರೆ. ದೊಡ್ಡ ದೊಡ್ಡ ಭೂಮಾಲೀಕರಿಗೆ ಇನ್‌ಕಂಟ್ಯಾಕ್ಸ್ ಇಲ್ಲ. ಅವರಿಗೆ ಎಷ್ಟೋ ತರಹ ಕನ್‌ಸೆಷನ್ ಇದೆ. ಏತಕ್ಕೆಂದರೆ ಕೇಂದ್ರ ಸರ್ಕಾರದವರು ಒಂದೇ ರೀತಿಯಾದ ಅಡ್ಮಿನಿಸ್ಟ್ರೇಷನ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಎಷ್ಟೋ ಹಣ ತೆರಿಗೆಯಿಂದ ಬರಬೇಕಾದ್ದು ಬರುವುದಿಲ್ಲ. ಈಗ ಸ್ಟೇಟ್ ಗೌವರ್ನ್‌ಮೆಂಟಿನಲ್ಲಿ ತಹಶೀಲ್ದಾರರು, ರೆವಿನ್ಯೂ ಆಫೀಸರ್ಸ್ ಬೇರೆ ಬೇರೆ ಸ್ಟ್ಯಾಫ್ ಇದೆ. ಒಂದು ವೇಳೆ ಅವರನ್ನೇ ಈ ತೆರಿಗೆಯನ್ನು ವಸೂಲು ಮಾಡಿ ಎಂದು ಹೇಳಿದರೂ ಕೂಡ ಅವರು ಅದನ್ನು ವಸೂಲ್ಮಾಡದೆ ದೊಡ್ಡ ದೊಡ್ಡ ಭೂಮಾಲೀಕರಿಗೆ ಕನ್‌ಸೆಷನ್ ತೋರಿಸಿದ್ದಾರೆ. ಇಂಥಾ ಪರಿಸ್ಥಿತಿಯಲ್ಲಿ ರೈತರ ಮೇಲೆ ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜ್ ಹಾಕಬೇಕೆಂದು ಏನೊಂದು ಮಸೂದೆಯನ್ನು ಈಗ ಈ ಸಭೆಯ ಮುಂದೆ ತಂದಿದ್ದಾರೋ ಅದು ಸರಿಯಾಗಿಲ್ಲ. ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು. ಇದನ್ನು ಇನ್ನೊಮ್ಮೆ ವಿಮರ್ಶೆ ಮಾಡಬೇಕು. ನೀರಾವರಿ ಜಮೀನಿಗಾಗಲಿ, ಅಥವಾ ಪ್ಲಾಂಟೇಷನ್‌ಗಾಗಲೀ ಸಾಕಷ್ಟು ಉತ್ಪನ್ನ ಬರುತ್ತಿದ್ದರೆ, ಅದರ ಮೇಲೆ ಬೇಕಾದರೆ ಹೆಚ್ಚಿಗೆ ತೆರಿಗೆಯನ್ನು ಹಾಕಿ. ಆದರೆ ಎಲ್ಲರ ಮೇಲೆಯೂ ಒಂದೇ ಸಮನಾಗಿ ತೆರಿಗೆಯನ್ನು ಹಾಕಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಡಿ. ಸಾಮ್ರಾಜ್ಯ (ಬ್ರಹ್ಮಾವರ).—ಮಾನ್ಯ ಸಭಾಪತಿಯವರೇ, ಈ ದಿವಸ ಭೂ ತೆರಿಗೆಯ ಮೇಲೆ ಸರ್‌ಛಾರ್ಜ್ ಹಾಕುವ ವಿಷಯದಲ್ಲಿ ಮಸೂದೆ ಈ ಸಭೆಯ ಮುಂದೆ ಬಂದಿದೆ. ಈ ತುರ್ತು ಪರಿಸ್ಥಿತಿಯಲ್ಲಿ ಹಣ ಬೇಕು. ಅದು ನಿಶ್ಚಯ. ಪ್ರತಿಯೊಂದಕ್ಕೂ ಹಣದ ಅಗತ್ಯ ಇದೆ. ಆದರೆ ತುರ್ತು ಪರಿಸ್ಥಿತಿಯಲ್ಲಿ ನಾವು ಇನ್ನೊಂದು ವಿಷಯವನ್ನು ಮುಖ್ಯವಾಗಿ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಅದು ಯಾವುದೆಂದರೆ ಆಹಾರ ಸಾಮಗ್ರಿ. ಆಹಾರ ಸಾಮಗ್ರಿಯನ್ನು ಬೆಳೆಯುವವರ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿಯೂ ಬಹಳ ಶೋಚನೀಯವಾಗುತ್ತದೆ. ನಮ್ಮ ಜಿಲ್ಲೆಯಲ್ಲೇ ನನ್ನ ಅನುಭವವನ್ನು ಹೇಳಬೇಕಾದರೆ 100 ಕ್ಕೆ 80 ಜನ ಸಾಲಗಾರರಿದ್ದಾರೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಅವರು ಕಂದಾಯವನ್ನು ಕೊಡುವ ಸ್ಥಿತಿಯಲ್ಲಿಲ್ಲ. ನಮ್ಮ ಕಡೆ ಸೆಟ್ಲ್‌ಮೆಂಟ್ ಆಗಿ ಇನ್ನೂ 30 ವರ್ಷ ಆಗಿಲ್ಲ. ಹಿಂದೆ ನಮ್ಮಲ್ಲಿ ಸೆಟ್ಲ್‌ಮೆಂಟ್ ಆಗುವಾಗ 30 ವರ್ಷಗಳ ತನಕ ಕಂದಾಯವನ್ನು ಜಾಸ್ತಿ ಮಾಡುವುದಿಲ್ಲವೆಂದು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಕಂದಾಯವನ್ನು ಜಾಸ್ತಿ ಮಾಡುವುದಿಲ್ಲ. ಆದರೆ ಸರ್‌ಛಾರ್ಜ್ ರೂಪದಲ್ಲಿ ಕಂದಾಯವನ್ನು ಜಾಸ್ತಿ ಮಾಡುತ್ತಿದ್ದಾರೆ. ಇದು ನ್ಯಾಯ ಎನಿಸಿದರೆ ಈಗ ಸರ್‌ಛಾರ್ಜ್ ಹಾಕುವುದರಿಂದ ನಾಲ್ಕು ಕೋಟಿ ರೂಪಾಯಿಗಳು ಜಾಸ್ತಿ ಬರಬಹುದು. ಆದರೆ ಆ ನಾಲ್ಕು ಕೋಟಿ ಹಣದಲ್ಲಿ ನಿಜವಾಗಿ ಅಹಾರವನ್ನು ಬೆಳೆಸುವವರದು ಒಂದು ಅಥವಾ ಎರಡು ಕೋಟಿ ರೂಪಾಯಿಗಳು ಬರಬಹುದು. ನನ್ನ ಸ್ವಂತ ಅಭಿಪ್ರಾಯದಲ್ಲಿ ಹೇಳುವುದಾದರೆ ಆಹಾರ ಸಾಮಗ್ರಿಯನ್ನು ಹೆಚ್ಚು ಬೆಳೆಯುವುದಕ್ಕೋಸ್ಕರ ಕಂದಾಯವನ್ನು ಮಾಫಿ ಮಾಡಬೇಕು. ಏತಕ್ಕೆಂದರೆ ಆಹಾರ ಸಾಮಗ್ರಿ ಬಹಳ ಅಗತ್ಯ. ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಅಕ್ಕಿಯನ್ನು ಬೆಳೆಸಬಹುದು. ಆದರೆ ಹುರುಳಿ ತೆಗೆದುಕೊಳ್ಳಬೇಕಾದರೆ ಒಂದಕ್ಕೆ ಹತ್ತರಷ್ಟು ಕೊಡುತ್ತಾರೆ. ಆದರೆ ಮದ್ರಾಸ್ ಸರ್ಕಾರ ಮೊದಲೇ ಕಂದಾಯವನ್ನು ಜಾಸ್ತಿ ಹಾಕಿತ್ತು. ಈಗ ನಮ್ಮ ಕಡೆಯಲ್ಲಿ III ಕ್ಲಾಸ್ ವೆಟ್‌ಲ್ಯಾಂಡ್ ಏನಿದೆ ಅದು ಪಾಳು ಬಿದ್ದಿರುತ್ತದೆ. ಆಕಾಶದ ಮಳೆಯ ನೀರು ಬಿದ್ದರೆ ಮಾತ್ರ ಸಾಕಾಗುತ್ತದೆ. ಮಳೆ ಬಿದ್ದಾಗ ಅದನ್ನು ಸಾಗು ಮಾಡುತ್ತಾರೆ. ಅದಕ್ಕೆ ಸರಿಯಾಗಿ ಮಳೆ ಆಗದಿದ್ದರೆ ಅಂಥಾ ಬಿಟ್ಟನ್ನು ಕೊಯ್ಯುವುದಕ್ಕೆ ಸಿಕ್ಕುವುದಿಲ್ಲ.

(ಶೀ ಎಸ್. ಡಿ. ಸಾಮ್ರಾಜ್ಯ)

7 ಆಣೆಯಿಂದ 14 ಆಣೆಯ ವರೆಗೆ ಕಂದಾಯ ಇದೆ. ಸೆಸ್ಸು ಬೇರೆ ಕೊಡುತ್ತಿದ್ದಾರೆ. ಮತ್ತು ಈ ಸರ್‌ಛಾರ್ಜನ್ನೂ ಕೊಡಬೇಕೆಂದರೆ ಜನಗಳಿಗೆ ಬಹಳ ಕಷ್ಟ ಆಗುತ್ತದೆ. ಇದನ್ನು ಯೋಚನೆ ಮಾಡಬೇಕು. ಸರ್ಕಾರಕ್ಕೆ ಹಣ ಜಾಸ್ತಿ ಬೇಕು. ಅದು ನಿಶ್ಚಯ. ಆದಷ್ಟು ಬೇಗನೆ ಯೋಚನೆ ಮಾಡಿ ಮೊದಲೇ ನಾನು ಹೇಳಿದ ಹಾಗೆ ಮಾನ್ಯ ಸದಸ್ಯರು ತಮ್ಮ ಸ್ವಂತ ಅಭಿಪ್ರಾಯವನ್ನೂ ಯೋಚನೆ ಮಾಡಬೇಕು. ಮತ್ತು ಸರ್ಕಾರದವರು ಕೂಡ ಇದನ್ನು ಆಲೋಚನೆ ಮಾಡಬೇಕು. ನಮಗೆ ಆಹಾರ ಸಾಮಾಗ್ರಿಗಳನ್ನು ಬೆಳೆಸುವ ಜಮೀನಿಗೆ ಕಂದಾಯವನ್ನು ಮಾಫಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮೆಲ್ಲರನ್ನೂ ಕೂಡ ಕೇಳಿಕೊಳ್ಳುತ್ತೇನೆ. ತುರ್ತುಪರಿಸ್ಥಿತಿಗೋಸ್ಕರ ಸರ್ಕಾರದವರು ಸರ್‌ಛಾರ್ಜ್ ಹಾಕುವುದಾದರೂ ಕೂಡ ಒಂದು ವರ್ಷದ ಮಟ್ಟಿಗೆ ಹಾಕಿ ನಂತರ ನಿಜವಾಗಿ ಯಾವುದರಲ್ಲಿ ಜಾಸ್ತಿ ಉತ್ಪತ್ತಿ ಇದೆ ಅದಕ್ಕೆ ಬೇಕಾದರೆ ಜಾಸ್ತಿ ತೆರಿಗೆಯನ್ನು ಹಾಕುವುದು ನಿಶ್ಚಯ. ಏನೂ ಉತ್ಪತ್ತಿ ಇಲ್ಲದೆ ಸಾಲ ಮಾಡಿಕೊಂಡಿರುವ ರೈತರ ಜಮೀನಿಗೆ ಕಂದಾಯವನ್ನು ಹಾಕಕೂಡದು. ಮೊದಲನೆಯದಾಗಿ ಸರ್ವೆ ಕೆಲಸ ಆಗಬೇಕು. ನಮ್ಮಲ್ಲಿ ಜನ ಮೊದಲು ಯಾವ ರೀತಿಯಲ್ಲಿದ್ದರು, ಈಗ ಯಾವ ರೀತಿಯಲ್ಲಿ ಇದ್ದಾರೆ ಎಂಬುದನ್ನು ನೋಡುವುದಾದರೆ, ಮೊದಲು ಒಬ್ಬನಿಗೆ ಒಂದು ದಿವಸಕ್ಕೆ ಸಾಗುವಳಿ ಮಜೂರಿ ಒಂದು ಸೇರು ಅಕ್ಕಿ ಇತ್ತು. ಇವೊತ್ತು 2ಸೇರು, 3ಸೇರು ಅಕ್ಕಿಯನ್ನು ಕೊಟ್ಟರೂ ಗದ್ದೆಯ ಸಾಗಿಗೆ ಬೇಕಾದ ಜನ ಸಿಗುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಯಾವ ರೀತಿ ಸಾಗು ಮಾಡಬೇಕು? ಯಾವ ರೀತಿ ಕಂದಾಯವನ್ನು ಜಾಸ್ತಿ ಕೊಡಬೇಕು ? ಸಾಮಾನ್ಯವಾಗಿ ಅಳಿಯ ಸಂತಾನದ ಕುಟುಂಬದಲ್ಲಿ 300—400 ಜನ ಇರುತ್ತಾರೆ. ಅವರನ್ನೆಲ್ಲಾ ಯಾವ ರೀತಿಯಲ್ಲಿ ನೋಡಿಕೊಳ್ಳಬೇಕು? ಮಕ್ಕಳಿಗೆ ಯಾವ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಕೊಡಬೇಕು ಎಂಬುದನ್ನೆಲ್ಲಾ ಯೋಚನೆ ಮಾಡಬೇಕು. ನಾನು ಯಾರ ಮೇಲೂ ತಪ್ಪು ಹಾಕುವುದಿಲ್ಲ. ಹಳ್ಳಿಯಲ್ಲಿ ಬಹಳ ಜನ ಸಾಗು ಮಾಡುವುದನ್ನು ಬಿಟ್ಟು ಪೇಟೆಗೆ ಬಂದು ವ್ಯಾಪಾರ ಮಾಡುವುದಕ್ಕೆ ಶುರುಮಾಡಿದ್ದಾರೆ.

ಇನ್ನು ಬರುಬರುತ್ತ ಹೀಗೇ ಆದರೆ ಹಳ್ಳಿಗಳಲ್ಲಿ ಯಾರು ಸಾಗುವಳಿಯನ್ನೇ ಮಾಡುವುದಿಲ್ಲ. ಈಗಾಗಲೇ ಈ ಕೃಷಿಯಲ್ಲಿ ಲಾಭವಿಲ್ಲ ಎನ್ನತಕ್ಕ ವಿಚಾರವು ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಈ ಅಂಶವನ್ನು ಸರ್ಕಾರದವರು ಮತ್ತು ಈ ಮಾನ್ಯ ಸಭೆಯವರು ಮುಖ್ಯವಾಗಿ ತಮ್ಮ ಗಮನದಲ್ಲಿಡಬೇಕು. ಆಹಾರ ಧಾನ್ಯಗಳ ಉತ್ಪತ್ತಿಗೆ ತೊಂದರೆ ಬಂದಾಗ ನಾವೆಲ್ಲರೂ ಎಲ್ಲಿಗೆ ಒಂದು ದಿವಸದ ಊಟಕ್ಕೆ ಹೋಗಬೇಕೆಂಬುದನ್ನು ನಾವೆಲ್ಲರೂ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ನಾವೇನಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಆಹಾರೋತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬುದರ ವಿಚಾರವಾಗಿ ಉತ್ತಮ ರೀತಿಯ ಸಲಹೆಗಳನ್ನು ಮಾಡಬೇಕೇ ವಿನಾಃ ಆಹಾರೋತ್ಪತ್ತಿಗೆ ಧಕ್ಕೆ ಬರತಕ್ಕ ಮಾರ್ಗವನ್ನು ಹಿಡಿಯಬಾರದೆಂಬುದು ನನ್ನ ವಾದ. ಈ ಅಂಶವನ್ನು ತಾವೆಲ್ಲರೂ ಆಲೋಚನೆ ಮಾಡಿ ನೋಡಬೇಕಾದ ವಿಚಾರ.

ಆದರೆ ಇದರಲ್ಲಿ ಮತ್ತೊಂದು ಅಂಶವೇನಿದೆಯೆಂದರೆ ನಮ್ಮಲ್ಲಿ ಇಲ್ಲಿಗಿಂತಲೂ ಬೇಸಾಯದ ಖರ್ಚು ವೆಚ್ಚಗಳು ಜಾಸ್ತಿ ಇರುತ್ತವೆ. ಆಹಾರ ಧಾನ್ಯಗಳ ಬೆಳೆ ಬೆಳೆಯಲು ನಮ್ಮಲ್ಲಿ ಖರ್ಚುಗಳು ಜಾಸ್ತಿ. ಇಲ್ಲಿ ಒಂದು ಎಕರೆಗೆ ಒಂದು ಗಾಡಿ ಗೊಬ್ಬರ ಹಾಕಿದರೆ ನಮ್ಮಲ್ಲಿ ಎಕರೆಗೆ ಹತ್ತು ಗಾಡಿ ಗೊಬ್ಬರ ಹಾಕಬೇಕು. ಏತಕ್ಕೆಂದರೆ ಅಲ್ಲಿ ಮಳೆ ಬೀಳುವುದು ಜಾಸ್ತಿ, ಭೂಮಿ ಸಾರವೆಲ್ಲಾ ಕೊಚ್ಚಿ ಹೋಗಿರುತ್ತದೆ; ಜಮೀನಿನಲ್ಲಿ ಏನೂ ಸಾರವಿರುವುದಿಲ್ಲ. ಇಲ್ಲಿ ಭೂಮಿಯನ್ನು ಮೂರಾವರ್ತಿ ಉತ್ತರೆ ನಮ್ಮಲ್ಲಿ ಹತ್ತಾವರ್ತಿ ಉಳಬೇಕು. ಇಷ್ಟೆಲ್ಲಾ ದುಬಾರಿ ಖರ್ಚಿನಲ್ಲಿ ಬೇಸಾಯ ಮಾಡಿದರೂ ಭತ್ತಕ್ಕೆ 16-18 ರೂಪಾಯಿಗಳ ಮೇಲೆ ಬೆಲೆ ಇಲ್ಲ. ಅಲ್ಲಿ ಕೊಯ್ಲು ಕಾಲದಲ್ಲೇ ನಾಟಿಯನ್ನು ಸಹ ಹಾಕಬೇಕು. ಇಲ್ಲವಾದರೆ ಅಲ್ಲಿ ನಮಗೆ ಹುಲ್ಲೇ ಸಿಗುವುದಿಲ್ಲ. ಇದರ ಜೊತೆಗೆ ನಮಗೆ ಈಗ ಇನ್ನೊಂದು ಸಂಕಷ್ಟ ಬಂದಿದೆ. ಮೊನ್ನೆತಾನೆ ಅಲ್ಲಿ ಬಂದ ಮಳೆಯಿಂದ ಬಡವರು ತಮ್ಮ ಹುಲ್ಲು ಗುಡಿಸಲುಗಳಿಗೆ ಹೊದಿಸಿದ್ದ ಹುಲ್ಲೆಲ್ಲ ಹಾಳಾಗಿ ಹೋಯಿತು. ಆ ಹುಲ್ಲು ಸಿಗದಿದ್ದರೆ ಬಡವರು ತಮ್ಮ ಜೋಪಡಿಗಳಿಗೆ ಚಾವಣಿಯನ್ನು ಹಾಕುವಂತೆಯೇ ಇಲ್ಲ. ಹೀಗೆಲ್ಲಾ ರೈತರಿಗೆ ಸಂಕಷ್ಟಗಳಿರುವುದರಿಂದ ಸರ್ಕಾರದವರು ತುರ್ತಾಗಿ ಸರ್ವೆ ಅಂಡ್ ರೀ-ಸೆಟಲ್‌ಮೆಂಟ್ ಮಾಡಿಸಬೇಕೆಂದು, ಅಲ್ಲಿಯತನಕ ಬೇಕಾಗಿದ್ದರೆ ತುರ್ತು ಪರಿಸ್ಥಿತಿಗಾಗಿ ಈ ಶಾಸನವನ್ನು ಕೇವಲ ಒಂದು ವರ್ಷ ಕಾಲದತನಕ ಜಾರಿಯಲ್ಲಿಟ್ಟು, ಆನಂತರ ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ನನ್ನ ಈ ಎರಡು ಮಾತುಗಳನ್ನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ ಅನುಸೂಚಿತ ಜಾತಿಗಳು).—

ಸ್ವಾಮಿ, ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ 1962ನೇ ಇಸವಿಯ ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜ್ ಅಮೆಂಡಿಂಗ್ ಬಿಲ್ಲನ್ನು ನಾನು ಸಂಪೂರ್ಣವಾಗಿ ವಿರೋಧಿಸಲು ಎದ್ದು ನಿಂತಿದ್ದೇನೆ.

ಈ ದಿವಸ ಈ ಬಿಲ್ಲನ್ನು ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಸರ್ಕಾರದವರು ಈ ಬಗ್ಗೆ ಕೆಲವಾರು ಕಾರಣಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಮಂಡಿಸುತ್ತ ಅವರಿಗೆ ಮನಸ್ಸಿನಲ್ಲಿ ಮನಸ್ಸಿಲ್ಲದಿದ್ದರೂ ತುರ್ತು ಪರಿಸ್ಥಿತಿಯೊದಗಿರುವುದರಿಂದ ಸರ್ಕಾರಕ್ಕೆ ದುಡ್ಡು ಬೇಕಾಗಿದೆ. ಈ ಮಸೂದೆಯನ್ನು ಜಾರಿಗೆ ತಂದರೆ ಇದರಿಂದ ಸರ್ಕಾರಕ್ಕೆ ನಾಲ್ಕು ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಸಿಗುತ್ತದೆ ಎಂತ ಹೇಳಿದರು. ಆದರೆ ಈ ಬಿಲ್ಲಿನಲ್ಲಿ ಕೊಟ್ಟಿರತಕ್ಕ Statement of Objects and Reasons ನಲ್ಲಿ ಈ ವಿಚಾರವನ್ನೇನೂ ಅವರು ತಿಳಿಸಿಲ್ಲ. ಆದರೆ ಮತ್ತೊಂದು ಮಾತು ಏನು ಹೇಳಿದ

(ಶ್ರೀ ಕೆ. ಎಚ್. ರಂಗನಾಥ)

ರೆಂದರೆ—ಸದ್ಯದಲ್ಲೇ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾರ್ಯವನ್ನು ಕೈಗೊಂಡು ಅದನ್ನು ಪೂರ್ತಿಗೊಳಿಸಲು ಕಾಲ ಹಿಡಿಯುತ್ತದೆ. ಆದರೆ ಸರ್ಕಾರಕ್ಕೀಗ ತುರ್ತು ಹಣ ಬೇಕಾಗಿದೆ. ಆದುದರಿಂದ ಈ ಸರ್‌ಛಾರ್ಜನ್ನು ಎರಡು ವರ್ಷಗಳ ಕಾಲ ಹಾಕೋಣವೆಂತ ಮನಸ್ಸು ಮಾಡಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. ಆದರೆ ಒಟ್ಟಿನಲ್ಲಿ ಅವರು ಹೇಳಿದಂಥ ಈ ವಿಷಯಗಳು ಬಿಲ್ಲಿನಲ್ಲಿ ಎಲ್ಲಿಯೂ ಅಡಕವಾಗಿಲ್ಲ. ಮತ್ತೆ........

SRI D. PARAMESWARAPPA (Honnali).—On a point of order, with regard to the amendment that has been brought today by the Revenue Minister. As you are aware this Bill was taken into consideration just two days ago. Today........

MR. DEPUTY SPEAKER.—The amendment is not yet moved.

ಶ್ರೀ ಕೆ. ಎಚ್. ರಂಗನಾಥ.—ಇನ್ನು ಇದಕ್ಕೆ ಒಂದು ತಿದ್ದುಪಡಿಯನ್ನು ಸರ್ಕಾರದವರು ತರುತ್ತಾರೆಂಬ ಒಂದು ಸೂಚನೆ ಬೇರೆ ಈ ಸಭೆಯ ಮುಂದೆ ಕೇಳಿಬರುತ್ತಿದೆ. ಇಂಥ ಒಂದು ಭರವಸೆ ಮೇಲೆ ನಾವೀಗ ಮಾತನಾಡಬೇಕಾಗಿದೆ. ಆದರೆ ನಾವು ಈ ರೀತಿ ಒಂದು ಕಾನೂನನ್ನು ಜಾರಿಗೆ ತರಬೇಕಾದರೆ ಇದನ್ನು ಯಾವ ರೀತಿ ಮಾಡಬೇಕು, ಈ ಬಗ್ಗೆ ನಾವು ಅನುಸರಿಸಬೇಕಾದ ಮಾರ್ಗಗಳೇನೆಂಬುದನ್ನು ವಿಶದವಾಗಿ ಲ್ಯಾಂಡ್ ರೆವಿನ್ಯೂ ಕೋಡಿನ ಸೆಕ್ಷನ್ 112ರಲ್ಲಿ ತಿಳಿಸಿದೆ. ನಾವು ಭೂಮಿಯ ಮೇಲೆ ಒಂದು ತೆರಿಗೆಯನ್ನು ವಿಧಿಸಬೇಕಾದರೆ ಅಥವಾ ವಿಧಿಸಿರತಕ್ಕಂಥಾವನ್ನು ಜಾಸ್ತಿ ಮಾಡಬೇಕಾಗಿದ್ದರೆ ಮೊದಲು ಜಮೀನು ರೀಸರ್ವೆ ಆಗಬೇಕು. ಅನಂತರವೇ ಈ ಅಸೆಸ್‌ಮೆಂಟ್ ಮೊಬಲಗನ್ನು ನಿರ್ಧರಿಸಬೇಕು ಎಂಬುದಾಗಿ ಆ. 112 ನೆಯ ಸೆಕ್ಷನ್ನಿನಂತೆ ವಿವರವಾಗಿ ಹೇಳಿರುತ್ತೆ. ಆ ಸೆಕ್ಷನ್ನಿನಲ್ಲಿ ಏನು ಹೇಳಿದ್ದಾರೆ ಎಂದರೆ ಒಂದಾವರ್ತಿ ವಿಧಿಸಿದ ಅಸೆಸ್‌ಮೆಂಟನ್ನು 30 ವರ್ಷಗಳ ಕಾಲ ಬದಲಾಯಿಸುವುದಿಲ್ಲ ಎಂಬ ಒಂದು ಗ್ಯಾರಂಟಿಯನ್ನು ಸರ್ಕಾರ ಕೊಟ್ಟಿದೆ. ಹೀಗೆ ಒಂದಾವರ್ತಿ ನಿಗಧಿ ಮಾಡಿದ್ದನ್ನು ಪುನಃ ಬದಲಾಯಿಸಬೇಕಾದರೆ ಆ ಜಮೀನಿನ ರೀಸರ್ವೆ ಆಗಬೇಕು ಮತ್ತು ರೈತನಿಗೆ ಸರ್ಕಾರ ಏನು ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿದೆ ಎಂಬುದನ್ನೂ, ರೈತನೇನು ಆ ಜಮೀನಿಗಾಗಿ ಶ್ರಮಪಟ್ಟಿದ್ದಾನೆಂಬುದನ್ನೂ ಗಣನೆಗೆ ತೆಗೆದುಕೊಂಡು ಆ ಕಂದಾಯವನ್ನು ನಿಗದಿ ಮಾಡಬೇಕೆಂದು ತಿಳಿಸಿದೆ. ಹೀಗಿರುವಾಗ ಸರ್ಕಾರದವರು ತಮಗೆ ದುಡ್ಡಿನ ತುರ್ತು ಅಗತ್ಯ ಬಂದಿದೆ, ಆದಕ್ಕಾಗಿ ಒಂದು ರೂಪಾಯಿ ಕೊಡುವ ಕಡೆ 2 ರೂ. ಕೊಡಿ ಎಂತ ಕೇಳುವುದು ಸರಿಯಾದ್ದಲ್ಲ. ಈ ಬಿಲ್ಲಿನಲ್ಲಿ "ಲ್ಯಾಂಡ್ ರೆವಿನ್ಯೂ" ಎಂಬ ಶಬ್ದಗಳಿಗೆ ಅರ್ಥವೇನೆಂಬುದನ್ನು ಕೊಡಲಾಗಿದೆ. ಈಗ ಸರ್ಕಾರದವರು ಒಂದಕ್ಕೆ ಎರಡರಷ್ಟು ಮಾಡುತ್ತೇವೆಂದು ಹೇಳುತ್ತಿರುವುದು ಕೇವಲ ಅಸೆಸ್‌ಮೆಂಟ್ ಒಂದನ್ನೇ ಅಲ್ಲ. ಆ ಅಸೆಸ್‌ಮೆಂಟಿನ ಮೇಲೆ ವಿಧಿಸಿರತಕ್ಕ ಸೆಸ್ಸುಗಳನ್ನೂ ಕೂಡ ಒಂದಕ್ಕೆ ಎರಡರಷ್ಟು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇಂಥ ಒಂದು ಕಾನೂನನ್ನು ಮಾಡುವಾಗ ನಾವೆಲ್ಲರೂ ಬಹಳ ಹುಷಾರಾಗಿರಬೇಕು. ವಾಟರ್ ರೇಟನ್ನು ವಿಧಿಸತಕ್ಕ ವಿಚಾರದಲ್ಲಿ ಇರಿಗೇಷನ್ ಆಕ್ಟಿನಲ್ಲಿ ನೇಮವಿದೆ. ಇದನ್ನೆಲ್ಲ ಮೂಲೆಗೊತ್ತಿ ಲ್ಯಾಂಡ್ ರೆವಿನ್ಯೂ ಏನಿದೆ ಅದನ್ನೂ, ವಾಟರ್‌ಸೆಸ್, ವಾಟರ್‌ರೇಟ್ ಮತ್ತು ಇತರ ಎಲ್ಲಾ ಸೆಸ್‌ಗಳನ್ನೂ ಒಂದಕ್ಕೆ ಎರಡರಷ್ಟು ಮಾಡುತ್ತೇವೆಂದರೆ ಇದು ಬಹಳ ದುಬಾರಿ ಆಯಿತು. ನಾವು ಇಂಥ ಮಸೂದೆಯನ್ನು ಆತುರಾತುರವಾಗಿ ಪಾಸ್ ಮಾಡುತ್ತಿದ್ದೇವೆ. ನಾಳೆ ಈ ಶಾಸನದ ಮೇಲೆ ಜನರು ಕೋರ್ಟಿಗೆ ಹೋಗಬಹುದು. ಆಗ ಆ ಖರ್ಚು ವೆಚ್ಚಗಳನ್ನೆಲ್ಲಾ ಸರ್ಕಾರವೇ ಹೊರಬೇಕಾಗುತ್ತದೆ. ಆದುದರಿಂದ ನಾನೀಗ ಸರ್ಕಾರದವರಲ್ಲಿ ಮತ್ತು ಈ ಸಭೆಯವರಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ ನಾವು ಇಷ್ಟು ಆತುರಾತುರವಾಗಿ ಇದನ್ನು ಪಾಸ್ ಮಾಡತಕ್ಕಂಥ ಅಗತ್ಯವೇನೂ ಇಲ್ಲ. ಇದನ್ನು ಕೂಲಂಕಷವಾಗಿ ವಿಚಾರ ಮಾಡೋಣ. ಈಗಾಗಲೇ ಸರ್ವೆ ಅಂಡ್ ಸೆಟಲ್‌ಮೆಂಟ್ ಕೆಲಸ ಅರ್ಧಂಭರ್ದ ಆಗಿವೆ. ಈ ರೀತಿ ನಾವು ಹೇಳುತ್ತಿರುವಾಗ ಸರ್ಕಾರದವರು ಒಂದು ಹೇಳಬಹುದು—ಇಲ್ಲಿಗೆ 40-50 ವರ್ಷಗಳಿಂದ ಸರ್ವೆ ಅಂಡ್ ಸೆಟಲ್‌ಮೆಂಟ್ ಆಗಿಲ್ಲ ಎಂದು. ಅದನ್ನು ಯಾರು ಮಾಡಬೇಡಿ ಎಂತ ತಡೆಹಿಡಿದಿದ್ದರು? ಆ ಕಾರ್ಯವನ್ನು ಮಾಡಬೇಡಿ ಎಂದು ರೈತರ್‍ಯಾರು ಹೇಳಿರಲಿಲ್ಲ. ಈ ಬಗ್ಗೆ ಚ್ಯುತಿ ಸರ್ಕಾರದವರ ಕಡೆಗಿದೆ. ಸರ್ಕಾರದವರು ತಮ್ಮ ಕಾರ್ಯ ನಿರ್ವಹಣೆಯಲ್ಲಿ ತ್ವರಿತವಾಗಿದ್ದರೆ ಅವರು ಈ ಹಿಂದೆಯೇ ನ್ಯಾಯವಾಗಿ ಈ ಭೂಕಂದಾಯವನ್ನು ಶಾಸ್ತ್ರೀಯ ರೀತಿಯಲ್ಲಿ ನಿಗದಿ ಮಾಡಿದ್ದಿದ್ದರೆ ನಮಗೀದಿವಸ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆದರೆ ಈ ದಿವಸ ಇಂಥ ಒಂದು ಮಸೂದೆಯನ್ನು ತರಲು ಸರ್ಕಾರದವರ ಉದ್ದೇಶವೇನಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ನಮ್ಮಲ್ಲಿ ತರಿ ಮತ್ತು ಭಾಗಾಯಿತುಗಳ ವಾಟರ್ ರೇಟನಲ್ಲಿ ಹಳೇ ಮೈಸೂರಿನಲ್ಲೂ ಬಹಳ ಏರುಪೇರಿದೆ. ಎಕರೆಗೆ 20-25 ರೂ. ಗಳ ವ್ಯತ್ಯಾಸವಿದೆ. ಹಿರಿಯೂರು ತಾಲ್ಲೂಕು, ವಾಣೀವಿಲಾಸ ಕೆರೆಯ ಕೆಳಗೆ ಒಂದು ಎಕರೆಗೆ ವಾಟರ್ ರೇಟ್ 25 ರೂ. ಗಳಿದೆ. ಆದರ ಮೇಲೆ ಒಂದು ರೂಪಾಯಿಗೆ ನಾಲ್ಕಣೆ ಸೆಸ್ಸಿದೆ. ಕೆಲವು ಕಡೆ ಆರುಕಾಲಾಣೆ ಇದೆ. ಹೀಗಾಗಿ ಆ ವಾಣೀವಿಲಾಸ ಕೆರೆಯ ಕೆಳಗೆ ನೀರು ಸರದಿಯನ್ನು ಒಂದು ಎಕರೆಗೆ 31 ರೂ. ಗಳವರೆಗೂ ಕೊಡುತ್ತಿದ್ದಾರೆ. ಈಗ ಈ ಸೆಸ್ಸನ್ನೂ ಒಂದಕ್ಕೆ ಡಬ್ಬಲ್ ಮಾಡಿದರೆ ಎಕರೆಗೆ ಈ ಸೆಸ್ಸೇ 62 ರೂ. ಗಳಾಗುತ್ತೆ. ಇದರ ಜೊತೆಗೆ ಡಬ್ಬಲ್ ಕಂದಾಯ ಬೇರೆ ಕೊಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—Not exceeding 15 Rupees ಎಂತ ಹೇಳಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ.—ಅಲ್ಲಿಗೂ 30-35 ರೂ. ಕೊಡಬೇಕಾಗಿ ಬರುತ್ತದೆ. ಖುಷ್ಕಿ ಜಮೀನಿನವರೇನೋ ಎಕರೆಗೆ ಒಂದು ರೂ. ಇದ್ದರೆ 2 ರೂ. ಕೊಡಬಹುದು. ಆದರೆ ತರೀ ಜಮೀನಿನವರು ಎಕರೆಗೆ 30 ರೂ. ಸೆಸ್ಸನ್ನೇ ಕೊಡಬೇಕೆಂದರೆ ಇದರಲ್ಲಿ ಯಾವ ಸಾಮರಸ್ಯವಿದೆ?

MR. SPEAKER.—The House will now rise for tea and will meet after half-an-hour.

House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair].

61st Birthday of Chief Minister.

Sri S. NIJALINGAPPA (Chief Minister).—Sir, before the Hon'ble Member Sri Ranganath resumes his Speech, may I take this opportunity to say that you, Sir, and members of the House have been kind enough to express their sentiments on this my 61st birthday and wished me well. I only want to express my gratitude for you and the members of this House for their kind sentiments and I assure you and the House, that I will continue to serve my country to the best of my capacity.

ಶ್ರೀ. ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ನಮ್ಮ ಮುಂದೆ ಇರತಕ್ಕ ಮಸೂದೆಯಲ್ಲಿ ಒಂದು ಸಮಂಜಸತೆ ಇಲ್ಲವೆಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಹಳೆಯ ಮೈಸೂರಿನ ಕೆಲವು ಜಿಲ್ಲೆಗಳಲ್ಲಿ ವಾಟರ್‌ರೇಟ್ 3 ರೂಪಾಯಿಗಳಿಂದ 25 ರೂಪಾಯಿಗಳವರೆಗೂ ಇದೆ. ಆದರೆ ನಮಗೆ ಹೊಸದಾಗಿ ಸೇರಿರತಕ್ಕ ಭಾಗಗಳಲ್ಲಿ ವಾಟರ್‌ರೇಟ್ ಏನೂ ಸ್ಪೆಷಲ್ಲಾಗಿ ಇಲ್ಲ. ತರೀ ಮತ್ತು ಭಾಗಯಿತು ವ್ಯವಸ್ಥೆ ಮಾಡುವ ರೈತರಿಗೆ ಹೆಚ್ಚು ಭಾರಬೀಳುತ್ತದೆ ಎನ್ನುವ ವಿಷಯವನ್ನು ಸಭೆಯ ಮುಂದಿಡಲು ನಾನು ಪ್ರಯತ್ನಪಡುತ್ತೇನೆ. ಸಾಮಾನ್ಯವಾಗಿ ತರೀ ಮತ್ತು ಭಾಗಾಯಿತು ವ್ಯವಸಾಯ ಬಹಳ ಕಷ್ಟಕರವಾದುದು. ಅದೇ ಡ್ರೈಲ್ಯಾಂಡಿನಲ್ಲಿ ವ್ಯವಸಾಯತೆ ಕಷ್ಟಕಡಿಮೆ, ಸ್ವಲ್ಪ ಉತ್ಪತ್ತಿ ಜಾಸ್ತಿ ಎನ್ನುವ ವಿಷಯ ಈ ಸಭೆಗೆ ಗೊತ್ತಿದೆ.

ಮತ್ತೊಂದು ವಿಷಯವೇನೆಂದರೆ ನಾವು ಈಗ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ಈಗ ದೇಶದಲ್ಲಿ ಎಲ್ಲರೂ ಕೂಡ ಒಂದು ಭಾವನೆಯನ್ನು ತಾಳತಕ್ಕ ಈ ಸಮಯದಲ್ಲಿ ಸರ್ಕಾರ ಇಂತಹ ಕಾನೂನನ್ನು ತರುವುದರಿಂದ ದೇಶದಲ್ಲಿರತಕ್ಕ ರೈತರ ಮನಸ್ಸಿನ ಮೇಲೆ ಯಾವವಿಧವಾದ ಪರಿಣಾಮವಾಗುತ್ತದೆ ಎಂಬುದಾಗಿ ಒಂದು ಯೋಚನೆ ಮಾಡುವ ಪರಿಸ್ಥಿತಿ ಬಂದಿದೆ. ಏತಕ್ಕೆಂದರೆ ಇಲ್ಲಿರುವ ರೈತ ಆದರಲ್ಲೂ ಕೂಡ ತರೀ ಮತ್ತು ಬಾಗಾಯಿತು ವ್ಯವಸಾಯ ಮಾಡುವ ರೈತ ಒಂದು ಎಕರೆಗೆ 30—35 ರೂಪಾಯಿಗಳನ್ನು ಕೊಡತಕ್ಕದ್ದು. ಅದೇ ರೈತ ಅದೇ ವಿಧವಾದ ವ್ಯವಸಾಯವನ್ನು ಇತರ ಬೇರೆ ಜಿಲ್ಲೆಗಳಲ್ಲಿ ವ್ಯವಸಾಯ ಮಾಡುವವನು ಸ್ವಲ್ಪ ಕಡಮೆ ಹಣವನ್ನು ಕೊಡುವುದು. ಈ ವಿಚಾರವಾಗಿ ರೈತರ ಮನಸ್ಸಿನ ಮೇಲೆ ಯಾವರೀತಿ ಪರಿಣಾಮ ವುಂಟಾಗುತ್ತದೆ, ಅವನ ಪರಿಸ್ಥಿತಿ ಇವತ್ತಿನ ದಿವಸ ಹೇಗಿದೆ ಎಂಬುದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಏಕೆಂದರೆ ಈ ಸಭೆಗೆ ಎಲ್ಲ ಅಧಿಕಾರವೂ ಇದೆ. ನಮಗೆ ಈ ದಿವಸ ಜನತೆಯ ಮೇಲೆ ಕರಹೇರತಕ್ಕ ಪ್ರಸಂಗವಿದೆ. ಕಾನೂನುಗಳನ್ನು ರಚನೆ ಮಾಡುವಾಗ ತುಂಬಾ ವಿಚಕ್ಷಣೆಯಿಂದ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇದರಿಂದ ಬರತಕ್ಕದ್ದು ಕೇವಲ 4 ಕೋಟಿ ರೂಪಾಯಿಗಳಷ್ಟೆ. ಅದಕ್ಕೋಸ್ಕರವಾಗಿ ಈ ಕರವನ್ನು ಹಾಕಿದರೆ ದೇಶದಲ್ಲಿ ಏನು ಪರಿಣಾಮ ವುಂಟಾಗುತ್ತದೆ. ರೈತನ ಪರಿಸ್ಥಿತಿಯೇನಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಇವತ್ತಿನ ದಿವಸ ರೈತ ಬಹಳ ಕಷ್ಟಕರವಾದ ಸ್ಥಿತಿಯಲ್ಲಿದ್ದಾನೆ. ಇಕಾನಮಿ ಮತ್ತು ರಿಸೋರ್ಸಸ್ ಕಮಿಟಿಯ ವರದಿಯಲ್ಲಿಯೂ ಸಾಮಾನ್ಯವಾಗಿ ಶೇ. 50 ಭಾಗದಷ್ಟು ಜನ ಅಥವಾ ರೈತರು ಒಂದು ಎಕರೆ ಜಮೀನಿಗೆ ಕಡಿಮೆ ಇರುವವರು ಇದ್ದಾರೆ. ಇನ್ನು ಶೇ. 15ರಷ್ಟು ಜನ 4 ಎಕರೆಗಳಿಗೆ ಕಡಿಮೆ ಇರುವವರು ಇದ್ದಾರೆ. ಎಂಬುದಾಗಿ ಒಂದು ಮಾತನ್ನು ಹೇಳಿದ್ದಾರೆ. ಒಂದು ಎಕರೆ ಅಥವಾ ಎರಡು ಎಕರೆಗಳಿದ್ದರೆ ಅವನ ಪರಿಸ್ಥಿತಿ ಹೇಗೆ? ಅದನ್ನು ಚೆನ್ನಾಗಿ ಸರ್ಕಾರದವರು ವಿಚಾರ ಮಾಡಬೇಕು. ಇನ್ನು ಆತನಿಗೆ ಕಂದಾಯದ ಹೊರೆ ಯಾವ ರೀತಿ ಇದೆಯೆಂಬುದನ್ನು ಹೇಳಬಯಸುತ್ತೇನೆ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ವಿಧವಾದ ಬಾಗಾಯಿತು ವ್ಯವಸಾಯವೂ ಇಲ್ಲ. ಬರೀ ತರೀ ವ್ಯವಸಾಯಕ್ಕನುಕೂಲವಾಗುವಂತಹ ಗದ್ದೆಗಳೇ ಇರುವುದು ಹೆಚ್ಚು. ಅಲ್ಲಿ ವಾಟರ್ ರೇಟ್ ಸಾಮಾನ್ಯವಾಗಿ ಒಂದು ರೂಪಾಯಿನಿಂದ 15 ರೂಪಾಯಿಗಳವರೆಗೆ ಮಾತ್ರ ಇದೆ. ಕೆಲವು ಸಣ್ಣ ರೈತರು ಎರಡು ಮೂರು ಎಕರೆಗಳಿರುವವರು ಇದ್ದಾರೆ. ಅಂತಹವರಿಗೆ ಒಂದು ಎಕರೆ ಜಾಸ್ತಿಯಾಗಿ ಕೊಡುವುದರಿಂದ 30 ರೂಪಾಯಿಗಳ ಕಂದಾಯ ಕೊಡುವ ಪರಿಸ್ಥಿತಿ ಬರುತ್ತದೆ. ಆ ಸಮಯದಲ್ಲಿ ವಿಚಾರ ಮಾಡಬೇಕಾದುದು ಏನೆಂದರೆ ಅವನ ಈಲ್ಡ್ ಎಷ್ಟು ಬರುತ್ತದೆ. ಅವನ ಉತ್ಪತ್ತಿ ಎಷ್ಟು ಬರುತ್ತದೆ ಎಂಬುದನ್ನು ವಿಚಾರ ಮಾಡಬಹುದು. ಅದೇ ರೈತ ಒಂದು ಎಕರೆ ತರೀ ಜಮೀನು ಇದ್ದು ಒಂದು ಕಡೆ ಹತ್ತಿ ಬೆಳೆದರೆ ಒಂದು ಎಕರೆಗೆ 50 ರೂಪಾಯಿನಂತೆ 500 ರೂಪಾಯಿಗಳನ್ನು ಸಂಪಾದಿಸುತ್ತಾನೆ. ಆದರೆ ಸಣ್ಣಪುಟ್ಟ ರೈತನಿಗೆ ಕೇವಲ 4 ಚೀಲ ಬತ್ತ ಬಂದರೆ ಅವನು ಜೀವನ ಹೇಗೆ ಮಾಡುತ್ತಾನೆ. ಅಂತಹವನು ಎಲ್ಲಾ ದೃಷ್ಟಿಯಿಂದಲೂ ಈ ಕರವನ್ನು ಹೊರತಕ್ಕದ್ದು ಸೂಕ್ತವೇ ಎಂಬುವುದನ್ನು ಈ ಸಭೆ ವಿಚಾರ ಮಾಡುವ ಪರಿಸ್ಥಿತಿ ಬಂದಿದೆ. ಏಕೆಂದರೆ ಈ ಇಕಾನಮಿ ಮತ್ತು ರಿಸೋರ್ಸಸ್ ಕಮಿಟಿಯ ವರದಿಯಲ್ಲಿ

(ಶ್ರೀ ಕೆ. ಎಚ್. ರಂಗನಾಥ್)

ನಾನು ಕೆಲವು ಭಾಗಗಳನ್ನು ಓದಿದಾಗ ಅದರಲ್ಲೂ
ಕೂಡ ಲ್ಯಾಂಡ್ ರೆವಿನ್ಯೂ ವಿಚಾರದಲ್ಲಿ ಸಾಮಾನ್ಯ
ವಾಗಿ ಈ ವರದಿಯನ್ನು ತಯಾರು ಮಾಡಿದಂತಹ
ಮಾನ್ಯ ಸದಸ್ಯರ ಮನಸ್ಸು ಕಣ್ಣು ಎಲ್ಲಾ ರೈತರ
ಮೇಲೆಯೇ ಬಿದ್ದ ಹಾಗೆ ಕಾಣುತ್ತದೆ. ಅವರಲ್ಲಿ
ಅರ್ನಿಂಗ್ ಕೆಪಾಸಿಟಿ ಮತ್ತು ಟ್ಯಾಕ್ಸ್ ಕೊಡುವ ಕೆಪಾ
ಸಿಟಿ ಜಾಸ್ತಿಯಾಗಿದೆ. ಒಟ್ಟನಲ್ಲಿ ನಮ್ಮ ಅಸೆಸ್
ಮೆಂಟುಗಳನ್ನೇನೋ ಜಾಸ್ತಿ ಮಾಡಲಿಲ್ಲ. ಸುಮ್ಮನೆ
ಅವರ ಮೇಲೆ ತೆರಿಗೆ ಹಾಕಬೇಕು ಎಂಬ ವಿಷಯ
ವನ್ನು ಹೇಳುತ್ತಾ ಬಂದಿದ್ದಾರೆ. ಇದು ಅಷ್ಟು
ಸೂಕ್ತವಾದುದಲ್ಲ. ಈ ಸಭೆಯ ಮುಂದೆ ಆ ಬಗ್ಗೆ
ಯಾವ ವಿಧವಾದ ಅಂಕಿ ಅಂಶವೂ ಇಲ್ಲ. ಏಕೆಂದರೆ
ಅವರ ಟ್ಯಾಕ್ಸಬಲ್ ಕೆಪಾಸಿಟಿ ಈಗ ಜಾಸ್ತಿಯಾಗಿದೆ.
ಯಾವ ವಿಧದಲ್ಲಿ ಜಾಸ್ತಿಯಾಗಿದೆ. ಅವರ ಖರ್ಚು
ವೆಚ್ಚಗಳೆಷ್ಟು, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿ
ಸಬೇಕಾದರೆ ಏನು ಮಾಡಬೇಕು ಈ ಎಲ್ಲಾ ವಿಚಾರ
ಗಳನ್ನು ಸರ್ಕಾರದವರು ಕೂಲಂಕುಷವಾಗಿ ವಿಚಾರ
ಮಾಡಿ ಪರಿಶೀಲಿಸಿ ತಕ್ಕ ಅಂಕಿ ಅಂಶಗಳನ್ನು ಇಟ್ಟಿ
ದ್ದರೆ, ಈ ಮುಸೂದೆಯನ್ನು ವಿಚಾರ ಮಾಡುವುದಕ್ಕೆ
ಅನುಕೂಲವಾಗುತ್ತಿತ್ತೆಂದು ನನ್ನ ಅಭಿಪ್ರಾಯ.
ಅಂತಹ ಒಂದು ಅಂಕಿ ಅಂಶ ಇಲ್ಲದೇ ಇರುವಾಗ
ಈಗ ಅವಸರವಸರವಾಗಿ ಹಣಬೇಕೆಂದು ಈ ಮುಸೂ
ದೆಯನ್ನು ಪಾಸ್ ಮಾಡುವುದು ಅಷ್ಟು ಸೂಕ್ತವಾದು
ದಲ್ಲವೆಂದು ನನ್ನ ಅಭಿಪ್ರಾಯ ಮತ್ತು ಕಾನೂನು
ರೀತಿಯಲ್ಲಿ ಆ ಅಸೆಸ್‌ಮೆಂಟ್‌ಗಳನ್ನು ಹೆಚ್ಚು ಮಾಡ
ಬೇಕಾದರೆ ಯಾವ್ಯಾವ ಕ್ರಮಗಳನ್ನು ಅನುಸರಿಸ
ಬೇಕು ಎಂದು ಸ್ಪಷ್ಟವಾಗಿ ಹೇಳಿರುವಾಗ ಅಂತಹ
ವಿಷಯಗಳನ್ನು ಕೈಬಿಡುವುದು ಸೂಕ್ತ ಕ್ರಮವಲ್ಲ.

ಏಕೆಂದರೆ ಜನತೆಗೆ ಏನೊಂದು ಅಭಿಪ್ರಾಯ ಬರು
ತ್ತದೆ ಎಂದರೆ ಈ ಸರ್ಕಾರ ಯಾವ ಕಾನೂನನ್ನಾದರೂ
ಮಾಡಬಲ್ಲದು. ಯಾವ ವಿಚಾರವನ್ನೂ ಗಣನೆಗೆ ತಂದು
ಕೊಳ್ಳುವುದಿಲ್ಲ ಎಂಬ ಅಭಿಪ್ರಾಯ ಮೂಡಿ ಸರ್ಕಾರ
ದಲ್ಲಿ ಜನತೆಗೆ ನಂಬಿಕೆ ಕಡಿಮೆಯಾಗುತ್ತದೆ ಎಂದು ನನ್ನ
ಅಭಿಪ್ರಾಯ. ಈಗ ನೀವು ಮಾಡಿರತಕ್ಕ ಕಾನೂನಿ
ನಲ್ಲಿ ಸರಿಯಾದ ತಿದ್ದುಪಡಿ ಮಾಡಬೇಕು, ಇಲ್ಲದೇ
ಹೋದರೆ ನಿಮಗೆ ಅಧಿಕಾರವಿದೆ ಎಂದು ನಿಮ್ಮ ಅಧಿ
ಕಾರವನ್ನು ಚಲಾಯಿಸುವುದು ಒಳ್ಳೆಯದಲ್ಲ ಎಂದು
ಸರ್ಕಾರದವರಿಗೆ ಮನವಿ ಮಾಡಿಕೊಳ್ಳಲಿಚ್ಛಿಸುತ್ತೇನೆ.
ಈ ಆಕ್ಟು ಬಹಳ ವ್ಯಾಪ್ತವಾಗಿದೆ. ಇದರಿಂದ ಎಲ್ಲರ
ತಲೆಯ ಮೇಲೂ ಬಹಳ ಹೊರೆ ಬೀಳತಕ್ಕ ಸಂದರ್ಭ
ಇದೆ. ಹಳೇ ಮೈಸೂರಿನಲ್ಲಿ ಸಾಧಾರಣವಾಗಿ
ಬಾಗಾಯ್ತು, ತರೀ ವ್ಯವಸಾಯ ಹೆಚ್ಚಾಗಿದೆ. ಹೊಸ
ದಾಗಿ ಸೇರಿರತಕ್ಕ ಭಾಗದಲ್ಲಿ ಅದು ಕಡಿಮೆ ಇದೆ.
ಇದು ಎಲ್ಲರಿಗೂ ಅನ್ವಯವಾಗಬೇಕು ಎನ್ನುವುದರಲ್ಲಿ
ನನ್ನ ಅಭ್ಯಂತರವಿಲ್ಲ. ಆದರೆ ಅಲ್ಲಿ ರೈತನ ಉತ್ಪನ್ನ
ಎಷ್ಟು ಮತ್ತು ಇಲ್ಲಿ ರೈತನಿಗೆ ಬರತಕ್ಕ ಉತ್ಪನ್ನ ಎಷ್ಟು
ಎಂಬುದನ್ನು ನೋಡಬೇಕು. ಒಬ್ಬೊಬ್ಬರು ಇಲ್ಲಿ 1-2
ಎಕರೆಯಷ್ಟು ಬಾಗಾಯ್ತು, 3-4 ಎಕರೆಯಷ್ಟು ಗದ್ದೆ
ಇಟ್ಟುಕೊಂಡಿರುವವರು ಇದ್ದಾರೆ. ಈ ದಿವಸ
ಯಾವ ಒಂದು ತತ್ವಕ್ಕನುಗುಣವಾಗಿ ಮಾಡಬೇಕೋ
ಆ ತತ್ವವನ್ನು ಪರಿಪಾಲನೆ ಮಾಡದೇ ಹೆಚ್ಚುಮಾಡು
ವುದು ಅವು ಸಮಾಂಜಸವಾದಲ್ಲಿ ಮತ್ತು ಈ ನಾಲ್ಕು
ಕೋಟಿ ರೂಪಾಯಿಗಳನ್ನು ಬೇರೆವಿಧದಲ್ಲಿ ಉತ್ಪನ್ನ
ಮಾಡಿಕೊಳ್ಳಲಿಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ
ಮಾಡಬೇಕು. ಇವತ್ತಿನ ದಿವಸ ಪಾನನಿರೋಧವನ್ನು
ತೆಗೆದುಹಾಕಿದ್ದರೆ ಹೇರಳವಾಗಿ ದುಡ್ಡು ಬರುತ್ತದೆ.
ಅದನ್ನು ಈ ಸಭೆ ಮನಗಂಡಿದೆ. ಮತ್ತು ಕೆಲವು
ಭಾಗದ ಸದಸ್ಯರ ಅಭಿಪ್ರಾಯವೂ ಕೂಡ ಹೀಗೆಯೆ
ಇದೆ. ಒಂದು ಕಾಲದಲ್ಲಿ ನೀವು ಇದನ್ನು ಜಾಗ್ರತೆಯಾಗಿ
ಮಾಡದೇ ರೈತರನ್ನು ಪೀಡಿಸುವುದು ಸಾಧುವಾದ
ಮಾತಲ್ಲ. ಈ ವಿಷಯದಲ್ಲಿ ಹೆಚ್ಚು ಯೊಚನೆ ಮಾಡ
ಬೇಕಾದ ಪ್ರಸಂಗವೂ ಕೂಡ ಇಲ್ಲ. ಇವತ್ತಿನ ದಿವಸ
ಈ ಸಭೆ ಮನಸ್ಸು ಮಾಡಿದರೆ ಪಾನನಿರೋಧ ಯಶಸ್ವಿ
ಯಾಗಿಲ್ಲ ಎಂಬುದನ್ನು ಮನಗಂಡು ಅದನ್ನು ತೆಗೆದು
ಹಾಕಿದ್ದೇ ಆದರೆ ಹೆಚ್ಚು ಹಣ ಸಂಪಾದನೆ ಮಾಡಲು
ಅವಕಾಶವಿದೆ. ಆದ್ದರಿಂದ ಹೆಚ್ಚು ಯೋಚನೆ
ಮಾಡದೇ ಪಾನನಿರೋಧವನ್ನು ತೆಗೆದು, ಕೈಗಾರಿ
ಕೋತ್ಪನ್ನವನ್ನು ಹೆಚ್ಚುಮಾಡಿ ದೇಶದ ಹಣಕಾಸಿನ
ಪರಿಸ್ಥಿತಿಯನ್ನು ಸುಧಾರಿಸಬಹುದೆಂದು ನಾನು
ಭಾವಿಸುತ್ತೇನೆ.

ಸರ್ಕಾರದವರಿಗೆ ಬರತಕ್ಕ ಬಾಕಿ ವಸೂಲಿ ನಿಧಾನ
ವಾಗುತ್ತಾ ಇದೆ. ಸಾಲಕೊಟ್ಟವರಿಂದ ಬರಬೇಕಾದ
ಹಣ ವಸೂಲಿ ಮಾಡದೆ ರೈತನ ಮೇಲೆ ಹೆಚ್ಚು ಹೊರೆ
ಹಾಕುವುದು ಸಾಧುವಾದುದಲ್ಲ.

ಕೆಲವು ಬಾಬುಗಳಿಂದ ಬರತಕ್ಕ ಹಣವನ್ನು
ಅಪವ್ಯಯ ಮಾಡುತ್ತಾ ಇದ್ದೀರಿ. ಒಂದು ಉದಾ
ಹರಣೆ ಕೊಡುವುದಾದರೆ ಚಿತ್ರದುರ್ಗ ಜಿಲ್ಲೆಯಲ್ಲಿ
ಅಂಗಡಿ ಬಾಕಿ ಕಲೆಕ್ಟ್ ಮಾಡತಕ್ಕ ಕಂಟ್ರಾಕ್ಟ
ದಾರರಿಂದ ಬರಬೇಕಾದ ಹಣ ಕೇವಲ $1-1\frac{1}{2}$
ತಿಂಗಳಿನ ಹಿಂದೆ ಮನ್ನಾಮಾಡಿದ್ದೀರಿ ಎಂದು
ತಿಳಿದು ಬಂದಿದೆ. ಇದು ಸಾಧುವಾದುದಲ್ಲ ಎಂದು
ತಿಳಿದುಕೊಂಡಿದ್ದೇನೆ. ಸರ್ಕಾರಕ್ಕೆ ಬರತಕ್ಕ ಹಣ
ವನ್ನು ಬಿಡುವುದು, ವಸೂಲು ಮಾಡುವುದನ್ನು
ನಿಧಾನ ಮಾಡುವುದು, ಮನ್ನಾ ಮಾಡುವುದು, ರೈತನ
ಮೇಲೆ ಹೆಚ್ಚು ಕರಭಾರವನ್ನು ಹೇರುವುದು ಇದರಲ್ಲಿ
ಯಾವವಿಧವಾದ ತತ್ವವೂ ಅಡಕವಾಗಿಲ್ಲ. ನಮಗೆ
ಹಣಬೇಕು. ನಮ್ಮ ಡೆವಲಪ್‌ಮೆಂಟ್ ವರ್ಕ್ಸ
ನಿಲ್ಲಿಸಬಾರದು. ಇದಾಗಬೇಕಾದರೆ ಸರ್ಕಾರ ತನ್ನ
ಕರ್ತವ್ಯದಲ್ಲಿ ಲೋಪಮಾಡಬಾರದು ಎಂದು
ಅವರಲ್ಲಿ ಮನವರಿಕೆ ಮಾಡುತ್ತೇನೆ. ಹೈದರಾಬಾದು,
ರಾಯಚೂರು ಭಾಗದಿಂದ ಬರತಕ್ಕ ಎಕ್ಸೈಜ್
ಡ್ಯೂಟೀಸ್ ಕೂಡ ಮನ್ನಾಮಾಡಿದ್ದೀರಿ ಎಂದು
ತಿಳಿದು ಬಂದಿದೆ. ನಾವು ಬಹಳ ಕಷ್ಟಪರಿಸ್ಥಿತಿಯಲ್ಲಿ
ಇದ್ದೇವೆ. ಬಹಳ ಜವಾಬ್ದಾರಿಯಿಂದ ಈ ಸಭೆ
ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ.
ಆದ್ದರಿಂದ ಯಾವುದೇ ಒಂದು ಪ್ರಾಯೋಗಿಕವಾಗಿ
ಸರ್ಕಾರಕ್ಕೆ ಬರತಕ್ಕ ಹಣವನ್ನು ಕೈಬಿಡುವುದು,
ಸಾಲವಸೂಲು ಮಾಡುವುದರಲ್ಲಿ ನಿಧಾನ ಮಾಡು
ವುದು ಮತ್ತು ಇಂಥ ಕಾನೂನನ್ನು ಜಾರಿಗೆ ತಂದು
ರೈತನ ಮೇಲೆ ಹೆಚ್ಚು ಭಾರಹಾಕುವುದು ಅಷ್ಟು
ಯೋಗ್ಯವಾದ ಮಾರ್ಗವಲ್ಲ ಎಂದು ಮನವರಿಕೆ
ಮಾಡಿಕೊಂಡು ಸರ್ಕಾರದವರು ದೊಡ್ಡ ಮನಸ್ಸು

(ಶ್ರೀ ಕೆ. ಎಚ್. ರಂಗನಾಥ್)

ಮಾಡಿ ಈ ಕಾನೂನನ್ನು ವಾಪಸುತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸಿಕೊಡುವುದು ಸೂಕ್ತ ಎಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[*Several Hon'ble Members rose*].

MR. SPEAKER.—I have got only 12 names before me. If more members want to speak, it is not possible to accomodate them. The Business Abvisory Committee has allotted 3½ hours for this Bill out of which 1½ hours was taken on Saturday. We have got 2 hours left over for today. As I said in the morning, in addition to that I can extend by an hour. Anyhow, we must finish the Bill today even if it is a quetion of sitting a little late, otherwise the Business Advisory Committee's report has no meaning.

ಶ್ರೀ. ಎಸ್. ಎಂ. ಕೃಷ್ಣ.—ಇದು ಬಹಳ ಮುಖ್ಯವಾದ ಮಸೂದೆ.

MR. SPEAKER.—Did it become important only after the adoption of the Business Advisory Committee's report?

ಶ್ರೀ. ಎಸ್. ಎಂ. ಕೃಷ್ಣ.—ಬಾಕಿ ಬಿಲ್ಲುಗಳ ಬಗ್ಗೆ ಒಂದಷ್ಟುಕಾಲ ಕಡಿಮೆ ಮಾಡಿದರೂ ಬರುತ್ತದೆ. ನಾವೆಲ್ಲರೂ ಕೂಡ ಗ್ರಾಮಾಂತರದ ಜನಗಳನ್ನು ಪ್ರತಿನಿಧಿಸತಕ್ಕವರು. ಆದ್ದರಿಂದ ಇಂಥಾ ಮುಖ್ಯ ಮಸೂದೆಯ ಮೇಲೆ ನಾವು ಮಾತನಾಡಿ ಜನಗಳ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸದಿದ್ದರೆ ನಮ್ಮ ಕರ್ತವ್ಯ ಲೋಪಮಾಡಿದ ಹಾಗಾಗುತ್ತದೆ ಎಂಬುದನ್ನು ಬಹಳ ನಮ್ರತೆಯಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಎಷ್ಟು ಜನಕ್ಕೆ ಸಾಧ್ಯವೋ ಅಷ್ಟು ಜನಕ್ಕೆ ಮಾತನಾಡಲು ಅವಕಾಶಕೊಟ್ಟು ...

MR. SPEAKER.—That is why I said that I extend it by one hour at my own discretion and if necessary for the rest of day till 6 o'Clock. If it is necessary, we will sit even half-an-hour more and finish the Bill today.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿಯವರು ತೀರ್ಮಾನ ಮಾಡುವಾಗ ಕೆಲವರು ಮಾತನಾಡಿ ಸಾಧ್ಯವಾದಷ್ಟು ಅವಕಾಶ ಕೊಡಬಹುದು ಎಂದು ಹೇಳಿದ್ದಾರೆ ಸ್ವಾಮಿ.

MR. SPEAKER.—The Hon'ble Member is drawing from his imagination.

Sri C. J. MUCKANNAPPA (Sira).—In view of so many amendments which have come to hand only just now, the time may not be enough.

MR. SPEAKER.—There are only 2 amendments.

ಶ್ರೀ ಎಸ್. ನಿಜಲಿಂಗಪ್ಪ.—ಈ ಮಸೂದೆಯನ್ನು ತಂದಿರುವ ಉದ್ದೇಶವನ್ನು ಸ್ಪಷ್ಟಪಡಿಸಿದರೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದೆಂದು ನನಗೆ ತೋರುತ್ತದೆ. ಇದರ ಆವಶ್ಯಕತೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ಆದುದರಿಂದಲೇ ಒಂದೆರಡು ತಿದ್ದುಪಡಿಗಳು ಮಾತ್ರ ಬಂದಿವೆ. ಸಾಕಷ್ಟು ಸಹಾನುಭೂತಿ ಸದಸ್ಯರಿಗೆ ಇವೆ ಎಂಬುದು ಸ್ಪಷ್ಟವಾಗಿದೆ. ಈ ಮಸೂದೆ ಶಾಶ್ವತವಾಗಿರುತ್ತದೆ ಎಂಬ ಅಭಿಪ್ರಾಯ ಸದಸ್ಯರಲ್ಲಿರಬಹುದು. ಹಾಗಿಲ್ಲ, ಸರ್ಕಾರದ ಹಣ ಕಾಸಿನ ತೊಂದರೆಯಿಂದ ಇದನ್ನು ತರಬೇಕಾಯಿತು. ನಾವು ನಮ್ಮ ಸಂಪತ್ತನ್ನು ಜಾಸ್ತಿಮಾಡಿಕೊಳ್ಳದಿದ್ದರೆ ಕೇಂದ್ರದಿಂದ ಬರಬೇಕಾದ ಸಹಾಯಕ್ಕೆ ಕೊರತೆ ಬರಬಹುದು. ನಾವು ನಮ್ಮ ಭಾಗದ ಹಣ ಒದಗಿಸಿಕೊಳ್ಳಲು ಏನುಮಾಡುತ್ತಿದ್ದೇವೆಂದು ಕೇಂದ್ರದವರು ನೋಡುತ್ತಿರುತ್ತಾರೆ. ಆ ದೃಷ್ಟಿಯಿಂದ ಈ ಮಸೂದೆಯನ್ನು ತಂದಿರುವುದಾಗಿದೆ.

ಮೈಸೂರು ಮತ್ತು ಮುಂಬಯಿ ಕರ್ಣಾಟಕದ ವಿಚಾರದಲ್ಲಿ ಹೇಳುವುದಾದರೆ 1902 ರಿಂದ 60 ವರ್ಷಗಳ ವರೆಗೆ ಯಾವುದೇ ರೀತಿಯ ಸರ್ವೆ ಮತ್ತು ಸೆಟ್ಲ್‌ಮೆಂಟ್ ಆಗಿಲ್ಲ. ಇದುವರೆಗೆ ಎರಡು ಸಲ ಆಗಬೇಕಾಗಿತ್ತು. ಈಗ ಸರ್ವೆ ಕೆಲಸವಾಗುತ್ತಿದೆ. ಬಹುಶಃ ಇನ್ನು ಒಂದು ವರ್ಷದಲ್ಲಿ ಆಗಬಹುದು. ಹೆಚ್ಚು ಜನ ಅಧಿಕಾರಿಗಳನ್ನಿಟ್ಟು ಬೇಗ ಈ ಕೆಲಸವನ್ನು ಪೂರ್ಣ ಮಾಡಬೇಕೆಂಬ ಇಚ್ಛೆಯಿದೆ. ಈ ಮಧ್ಯೆ ಮಾಡತಕ್ಕ ಕೆಲಸ ಬಹಳ ಹೆಚ್ಚಾಗಿದೆ. ಮೊನ್ನೆ ಈ ಸಭೆಯಲ್ಲಿ ಅರಿಕೆಮಾಡಿದ ಹಾಗೆ ಸಣ್ಣ ಸಣ್ಣ ಕೆರೆಗಳು, ನೀರಾವರಿ ಯೋಜನೆಗಳು, ಒಡ್ಡು ಹಾಕುವುದು, ಮುಂತಾದುವು ತೀವ್ರವಾಗಿ ನಡೆಯುಬೇಕು. ಹಣದ ಕೊರತೆಯಿಂದ ಆ ಕೆಲಸ ನಿಲ್ಲಬಹುದೆಂಬ ಸಂದೇಹದಿಂದ ಈ ಮಸೂದೆಯನ್ನು ತರಲಾಗಿದೆ. ಇದು ಶಾಶ್ವತವಾಗಿ ಉಳಿಯಬೇಕೆಂಬ ಇಷ್ಟವಿಲ್ಲ. ಒಂದು ವರ್ಷದಲ್ಲಿ ಸರ್ವೆ ಸೆಟ್ಲ್‌ಮೆಂಟ್ ಮಾಡಿ ಎಷ್ಟು ಸೂಕ್ತವೋ ಅಷ್ಟು ಕಂದಾಯ ಹಾಕಬೇಕೆಂಬ ಉದ್ದೇಶವಿದೆ. ಸಾಧ್ಯವಾದಮಟ್ಟಿಗೆ ಅದಕ್ಕೆ ಪ್ರಯತ್ನಿಸಲಾಗುವುದು.

ನಮ್ಮ ಡಿಮ್ಯಾಂಡಿಗೆ ಚೈನಾ ಪ್ರತಿಕ್ರಿಯೆ ಏನು ಎಂದು ಇವತ್ತಿನ ದಿವಸ ಮಾನ್ಯ ಮಿತ್ರರು ಪತ್ರಿಕೆಯಲ್ಲಿ ಓದಿರಬಹುದು. ಅವರನ್ನು ನಂಬುವುದಕ್ಕೆ ಸಾಧ್ಯವೇ ಇಲ್ಲ. ಈ ಒಂದು ದೃಷ್ಟಿಯಿಂದ ಜನರು ನಾನಾ ರೀತಿಯಲ್ಲಿ ಸಹಾಯಮಾಡಬೇಕಾದಾಗ ರೈತರು ಇದನ್ನು ಯುದ್ಧದ ಪರಿಸ್ಥಿತಿಯಲ್ಲಿ ತರಲಾಗಿದೆಯೆಂದು ತಿಳಿದು ಸಹಕರಿಸಬೇಕಾಗಿದೆ. ಇದೇ ರೀತಿ

(ಶ್ರೀ ಎಸ್. ನಿಜಲಿಂಗಪ್ಪ)

ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಹಾಕಿದ್ದೇವೆ ರೈತರು ಒಂದು ವರ್ಷ ಈ ತೆರಿಗೆ ಕೊಡಲಿ. ಒಂದು ವರ್ಷದಲ್ಲಿ ಸರ್ವೆ ಸೆಟ್ಲ್‌ಮೆಂಟ್ ಕೆಲಸ ಪೂರೈಸಬಹುದು. ಬಹಳ ಹೆಚ್ಚು ಎಂದರೆ ಎರಡು ವರ್ಷಗಳಲ್ಲಾಗಬಹುದು., ಈಗ 5 ಎಕರೆಗಳಿಗಿಂತ ಕಡಿಮೆ ಖುಷ್ಕಿ ಜಮೀನಿರುವವರಿಗೆ ವಿನಾಯಿತಿಯಿದೆ. ಆಂಧ್ರದಲ್ಲೂ ಇಂಥ ಮಸೂದೆಯನ್ನು ಮೊನ್ನೆ ಅಂಗೀಕರಿಸಿದ್ದಾರೆ. ಅದಷ್ಟುಮಟ್ಟಿಗೆ ಸಣ್ಣ ರೈತರಿಗೆ ತೊಂದರೆಯಾಗಬಾರದೆಂದು 5 ಎಕರೆಗಳಿಗಿಂತ ಕಡಮೆ ಇರುವ ಖುಷ್ಕಿ ಜಮೀನುದಾರರಿಗೆ ವಿನಾಯಿತಿ ತೋರಿಸಿದೆ. ಈ ದಿವಸ ಒಂದು ವಿಶೇಷ ಪರಿಸ್ಥಿತಿಯಲ್ಲಿ ಈ ಮಸೂದೆ ತಂದಿರುವುದರಿಂದ ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ.

†ಶ್ರೀ ವಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, ಈ ಸಭೆಯ ಮುಂದೆ ತಂದಿರುವ ಮೈಸೂರುರಾಜ್ಯದ ಭೂಕಂದಾಯದ ಮೇಲೆ ಸರ್‌ಛಾರ್ಜ್ ವಿಧಿಸುವುದಕ್ಕೆ ಸಂಬಂಧಪಟ್ಟ ತಿದ್ದುಪಡಿ ಮಸೂದೆಯ ಮೇಲೆ ಅನೇಕ ಸದಸ್ಯರು ಮಾತನಾಡಿ ಸಲಹೆ ನೀಡುತ್ತಾ ಇದನ್ನು ಜನತೆಯ ಮುಂದಿಟ್ಟು ಅಭಿಪ್ರಾಯ ಪಡೆಯಬೇಕು. ಸರಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿದರು. ಯುದ್ಧದ ಪರಿಸ್ಥಿತಿಯಿಂದ ಅನಿವಾರ್ಯವಾಗಿ ಈಗ ರೈತರ ಮೇಲೆ ಹೊರೆ ಹೊರಿಸಬೇಕಾಗಿದೆಯೆಂದು ನಮ್ಮ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಇದು ರೈತರಿಗೆ ಹೊರೆಯಾಗುತ್ತದೆ. ಯಾವ ತೆರಿಗೆ ಹಾಕಿದರೂ ರೈತರಿಗೆ ಹೆಚ್ಚು ತೊಂದರೆಯಾಗುತ್ತದೆ. ಏಕೆಂದರೆ ಬೇರೆಯವರು ದೊಡ್ಡ ದೊಡ್ಡ ವ್ಯಾಪಾರ ಮುಂತಾದ್ದನ್ನು ಮಾಡುತ್ತಿದ್ದಾರೆ. ಅವರಿಗೆ ತೆರಿಗೆ ಹೆಚ್ಚಾಗಿ ಹಾಕಿದರೆ ತಪ್ಪಾಗುವುದಿಲ್ಲ ಮತ್ತು ಅವರಿಗೆ ಕೊಡಲು ಶಕ್ತಿಯಿದೆ. ದಕ್ಷಿಣಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಈಗಾಗಲೆ ಮದ್ರಾಸು ಸರ್ಕಾರದವರು ಬೇಕಾದಷ್ಟು ತೆರಿಗೆ ಹಾಕಿದ್ದಾರೆ. ಹಾಗಿರುವಾಗ ಈ ತೆರಿಗೆ ಹಾಕಿದರೆ ದೊಡ್ಡ ಅನ್ಯಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ನಮ್ಮಲ್ಲಿ ಕೆಲವು ರೈತರು ಈಗಾಗಲೇ ತೆರಿಗೆ ಭಾರದಿಂದ ತುಂಬಾ ನರಳುತ್ತಿದ್ದಾರೆ. ಈಗಾಗಲೆ ದಿನನಿತ್ಯದ ಬಳಕೆ ಸಾಮಾನುಗಳ ಬೆಲೆಯೇರಿ ದಿವಸ ದೂಡುವುದು ಬಹಳ ಕಷ್ಟದಾಗಿದೆ. ಇಂಥಹ ಸಮಯದಲ್ಲಿ ರೈತರ ಮೇಲೆ ಹಾಕಿರುವ ತೆರಿಗೆಯನ್ನು ಒಂದೇ ಸಮನೆ ಏರಿಸುವುದು ಸೂಕ್ತವಾಗಿ ಕಾಣುವುದಿಲ್ಲ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವಾಗ ಕಷ್ಟಪಟ್ಟು ದುಡಿಯುವ ರೈತರ ಮೇಲೆ ಈ ತೆರಿಗೆ ಹಾಕಿದರೆ ಉದ್ದೇಶ ಸಾಧ್ಯತೆಯಾಗುವುದಿಲ್ಲವೆಂದು ಹೇಳಲಿಚ್ಛಿಸುತ್ತೇನೆ. ರೈತರು ನಮ್ಮ ದೇಶದ ಬೆನ್ನುಮೂಳೆಯಂತಿದ್ದಾರೆ. ಅವರ ಮನಸ್ಸಿಗೆ ನೋವನ್ನುಂಟು ಮಾಡಿದರೆ ಉತ್ಪತ್ತಿಗೆ ಧಕ್ಕೆ ಬರಬಹುದು. ಇದಕ್ಕೆ ಬದಲಾಗಿ ಎಷ್ಟೋ ಸಾರಿ ಈ ಸಭೆಯಲ್ಲಿ ನಾನು ಒತ್ತಿ ಹೇಳಿದಂತೆ ದಯೆಯಿಟ್ಟು ಪಾನನಿರೋಧವನ್ನು ರದ್ದುಮಾಡಿ ದೇಶದ ಸಂಪತ್ತನ್ನು ಜಾಸ್ತಿ ಮಾಡಿಕೊಳ್ಳಬೇಕು.

4 P. M.

ಇದರಿಂದ ಯಾವತ್ತೂ ಜನತೆಯ ಆರ್ಥಿಕ ಮತ್ತು ನೈತಿಕ ಮಟ್ಟ ಉತ್ತಮವಾಗಿಲ್ಲ. ಮುಖ್ಯ ಮಂತ್ರಿಗಳು ಮೊನ್ನೆ ಬೊಂಬಾಯಿನಲ್ಲಿದ್ದಾಗ ಒಂದು ಹೇಳಿಕೆ ಕೊಟ್ಟು ಈ ಅಧಿವೇಶನದಲ್ಲಿ ಈ ಬಗ್ಗೆ ಏನಾದರೂ ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಈ ಹೊತ್ತು ಇನ್ನೊಂದು ರೀತಿ ಕಾಣುತ್ತದೆ. ದಕ್ಷಿಣ ರಾಜ್ಯಗಳ ಮಂತ್ರಿಗಳು ಒಟ್ಟು ಸೇರಿ ತೀರ್ಮಾನಕ್ಕೆ ಬರುತ್ತೇವೆಂದು ಹೇಳಿದ್ದಾರೆ. ಇದು ಅವರ ಗೌರವದ ಪ್ರಶ್ನೆಯಾಗಿದೆಯೆಂದು ಕಾಣುತ್ತದೆ. ದೇಶದ ಜನತೆ ಗಂಡಾಂತರದಲ್ಲಿ ನರಳುತ್ತಿರುವಾಗ, ಈಗಾಗಲೇ ರೈತರು ಸಾಧ್ಯವಾದಷ್ಟು ಸಹಾಯ ಕೊಟ್ಟಿದ್ದಾರೆ. ಬೇರೆಯವರು ವ್ಯಾಪಾರಸ್ಥರು, ಕೋಟ್ಯಾಧೀಶರು, ಹೆಚ್ಚು ಹಣ ಮಾಡುವವರಿಗಿಂತ ಹೆಚ್ಚಾಗಿ ಯುದ್ಧ ನಿಧಿಗೆ ಅರ್ಪಣೆ ಮಾಡಿದ್ದಾರೆ. ಯುದ್ಧಕ್ಕೆ ಹೆಚ್ಚು ತೆರಿಗೆ ತೆರೆಬೇಕಾಗುತ್ತದೆ. ಇದನ್ನು ಹೊರಬೇಕಾಗುತ್ತದೆ ಎಂದು ಇದನ್ನು ಜಾರಿ ಮಾಡಿದರೆ ಜುಲುಂ ಮಾಡಿದ ಹಾಗಾಗುತ್ತದೆ. ತೊಗಲಕ್ ಸರ್ಕಾರದಲ್ಲಿ ಜುಲುಂ ಮಾಡಿ ತೆರಿಗೆ ವಸೂಲು ಮಾಡುತ್ತಿದ್ದ ಸಂದರ್ಭವನ್ನು ಜನರು ನೆನಸಿಕೊಳ್ಳುವ ಹಾಗಾಗುತ್ತದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಅನಾವಶ್ಯಕವಾದ ಕೆಲವನ್ನು ಖೋತಾ ಮಾಡುವುದು ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ. ಡೆವಲಪ್‌ಮೆಂಟ್ ಬ್ಲಾಕ್‌ಗಳಲ್ಲಿ ಕೆಲವು ಅನಾವಶ್ಯಕವಾದ ಕೆಲಸಗಳಿವೆ. ಒಂದು ಬ್ಲಾಕಿನಲ್ಲಿ ಎರಡು ಮೂರು ಜನ ಹೆಣ್ಣುಮಕ್ಕಳು ಹೋಗುತ್ತಿದ್ದರು. ಅವರನ್ನು ಕೇಳಿದಾಗ 'ನಾವೆಲ್ಲ ಮೊಗನ್‌ಚೂಲ ಟ್ರೆನಿಂಗ್ ಆದವರು' ಎಂದು ಹೇಳಿದರು. ಹೊಗೆಬಾರದೆಇರುವ ಹಾಗೆ ಅಡಿಗೆ ಮಾಡುವುದನ್ನು ನಾವು ಕಲಿಸುತ್ತೇವೆ ಎಂದು ಹೇಳಿದರು. ಆದರೆ ಆ ಹುಡುಗಿಯರು ಯಾವತ್ತೂ ಹಳ್ಳಿಯಲ್ಲಿ ಕೆಲಸ ಮಾಡುವುದನ್ನು ನೋಡಿಲ್ಲ. ಹಳ್ಳಿಯಲ್ಲಿ ನಾನು ವಿಚಾರಮಾಡಿ ನೋಡಿದೆ. ಹಳ್ಳಿಯವರು ಅವರನ್ನು ಯಾವತ್ತೂ ನೋಡಿಲ್ಲ. ಅವರು ಕಾಪಿಗೆ ಬಂದು ಒಂದು ವರ್ಷ ಆಯಿತು ಎಂದು ಹೇಳಿದರು. ಇಂಥ ಕೆಲಸಗಳನ್ನು ಸರ್ಕಾರ ಇಟ್ಟುಕೊಂಡಿದ್ದಾರೆ. ರೈತನಿಗೆ ಸಂಬಂಧಪಟ್ಟ ಗೊಬ್ಬರದ ವಿವರಣೆ, ಬೀಜದವಿವರಣೆ ಕಾರ್ಯವನ್ನು ಬ್ಲಾಕ್‌ಗಳಿಂದ ಸಂಪೂರ್ಣವಾಗಿ ತೆಗೆದು ಈ ಅಧಿಕಾರವನ್ನು ತಾಶಿಲ್ದಾರ್ ಅವರಿಗೆ ಕೊಟ್ಟರೆ ಅದರಿಂದ ಕೆಲಸ ಉತ್ತಮವಾಗುತ್ತದೆ. ಇದನ್ನು ಸರ್ಕಾರ ಯೋಚನೆಮಾಡಬೇಕೆಂದು ಹೇಳುತ್ತೇನೆ. ಖಾದಿಬೋರ್ಡು ಗ್ರಾಮಗಳಲ್ಲಿ ಒಳ್ಳೆಯ ಕೆಲಸಮಾಡುತ್ತಿದೆ, ಅದನ್ನು ರದ್ದುಮಾಡಲಿಕ್ಕಾಗುವುದಿಲ್ಲವೆಂದು ಮೊನ್ನೆ ಮುಖ್ಯಮಂತ್ರಿಗಳು ಹೇಳಿದರು. ಸಂಪೂರ್ಣವಾಗಿ ಅದನ್ನು ತೆಗೆದುಹಾಕಿ ಎಂದು ನಾನು ಹೇಳಲಿಲ್ಲ. ಅದರಲ್ಲಿ ಹತ್ತು ಹದಿನೈದು ಶಾಖೆಗಳನ್ನಿಟ್ಟುಕೊಂಡಿದ್ದಾರೆ. ಜೆಂಕಿ ಪಟ್ಟಣಮಾಡುವುದು, ಸಾಬೂನು ತಯಾರಿಕೆ, ಕೊಟ್ಟಣದ ಅಕ್ಕಿ ತಯಾರಿಕೆ, ಗಾಣದ ಎಣ್ಣೆ ತಯಾರಿಕೆ, ಮುಂತಾದುವುಗಳನ್ನಿಟ್ಟುಕೊಂಡಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ಕೆಲವರು undue advantage ಪಡೆಯುತ್ತಿದ್ದಾರೆ. ಇದನ್ನು ತಪ್ಪಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆಕೊಟ್ಟು ಇಂಥ

ಒಂದು ಕೆಲಸ ಮಾಡುವವರಿಗೆ ಮಾತ್ರ ಸಹಾಯ ಸಿಕ್ಕುತ್ತದೆಂದು ಹೇಳಿ, ಅದರಂತೆ ಮಾಡಿ, ಆ ಹಣ ದುರ್ವ್ಯಯವಾಗದೇಯಿರುವ ಹಾಗೆ ನೋಡಿಕೊಳ್ಳುವುದು ಉತ್ತಮ. ಅಲ್ಲದೆ ರೈತರ ಮೇಲೆ ತೆರಿಗೆ ಹೆಚ್ಚು ಹೊರಿಸುವುದಕ್ಕೆ ಬದಲು ನಮ್ಮ ಮೈಸೂರು ರಾಜ್ಯದಲ್ಲಿ ಕೋಟ್ಯಾಧೀಶರಿದ್ದಾರೆ. ಕೆಲವು ಕಡೆ ಕೋಟ್ಯಾಂತರ ರೂಪಾಯಿ ಇದೆ. ಅಂಥವರಿಂದ ವಸೂಲು ಮಾಡಲು ಪ್ರಯತ್ನಿಸಿದರೆ ನಾವೂ ಸಹಕರಿಸುತ್ತೇವೆ. ರೈತರಿಗೆ ತೆರಿಗೆ ಹಾಕುವುದಕ್ಕೆ ಬದಲು ಇಂಥ ಹಣವಂತರಿಗೆ ತೆರಿಗೆ ಹಾಕುವುದಕ್ಕೆ ಕಾನೂನು ತಂದಿದ್ದರೆ ಚೆನ್ನಾಗಿತ್ತು. ರೈತರಿಗೆ ಕಿರುಕುಳ ತಪ್ಪುತ್ತಿತ್ತು. ಅಲ್ಲದೆ ಯುದ್ಧಕ್ಕೆ ಹೆಚ್ಚಿನ ಹಣ ಪಡೆಯುವ ಉದ್ದೇಶವೂ ನೆರವೇರುತ್ತಿತ್ತು. ನಾವು ಏನಾದರೂ ತ್ಯಾಗಮಾಡಲು ಸಿದ್ಧವಾಗಿದ್ದೇವೆಂದು ನಮ್ಮ ಮಿತ್ರರು ಹೇಳಿದ್ದಾರೆ. ನಮ್ಮ ರಾಜ್ಯದ ಮಂತ್ರಿಮಂಡಲವನ್ನು ಕಡಿಮೆಮಾಡಬಹುದು. ಮಂತ್ರಿಗಳ ಸಂಬಳವನ್ನು ಖೋತಾ ಮಾಡಬಹುದೆಂದು ಹೇಳಿದ್ದಾರೆ. ಇನ್ನೂ ಅನೇಕ ಸಲಹೆಗಳನ್ನು ಮಾಡಿದ್ದಾರೆ. ಇದಕ್ಕೆ ಮಂತ್ರಿಗಳಾರೂ ಸಿದ್ಧವಿಲ್ಲದಿದ್ದರೆ ರೈತರ ಮೇಲೆ ತೆರಿಗೆ ಹೊರಿಸಬಾರದು. ರೈತರು ದೇಶದ ಬೆನ್ನು ಮೂಳೆ, ಅವರು ಮುನಿದರೆ, ಯುದ್ಧಕ್ಕೆ ಬೇಕಾದ ವ್ಯವಸಾಯೋತ್ಪನ್ನಗಳನ್ನು ಹೆಚ್ಚಿಸಬೇಕೆಂಬ ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ತುರ್ತು ಪರಿಸ್ಥಿತಿಯಿರುವ ಕಾಲದಲ್ಲಿ ನಾವೂ ಸರ್ಕಾರದ ಜೊತೆಗಿದ್ದೇವೆ. ಈ ವಿಷಯವನ್ನು ನಮ್ಮ ಪಿ. ಎಸ್. ಪಿ. ಮೀಟಿಂಗಿನಲ್ಲಿ ಚರ್ಚೆ ಮಾಡಿದೆವು. ಬೇಕಾದರೆ ಈ ಅಸೆಂಬ್ಲಿಯನ್ನು ರದ್ದು ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕಮಾಡಿ, ಅವರಿಗೆ ಅಧಿಕಾರ ಕೊಟ್ಟು, ಅವರಿಗೆ ಸಲಹೆ ಕೊಡುವುದಕ್ಕೆ ಅಡ್ವೈಜರಿ ಸಮಿತಿ ಮಾಡಲಿ. ಅಂತೂ ರೈತರ ತೆರಿಗೆಯ ಹೊರೆಯನ್ನು ಹೆಚ್ಚುಮಾಡಬಾರದೆಂದು ಹೇಳುತ್ತೇನೆ.

†ಶ್ರೀ ಅಂದಾನಯ್ಯ (ಕುಣಿಗಲ್).— ಅಧ್ಯಕ್ಷರೆ, ಮಾನ್ಯ ರೆವಿನ್ಯೂ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದಿಡುತ್ತಾ ದೇಶದಲ್ಲಿ ತುರ್ತು ಪರಿಸ್ಥಿತಿ ಉಂಟಾಗಿದೆ, ಕೇಂದ್ರ ಸರ್ಕಾರ ನಮಗೆ ಕೊಡಬೇಕಾದ ಹಣವನ್ನು ಕಡಮೆ ಮಾಡಿದೆ, ಆದುದರಿಂದ ಈ ಸರ್‌ಚಾರ್ಜು ಹಾಕಬೇಕಾಗಿದೆಯೆಂದು ಹೇಳಿದರು. ತೆರಿಗೆಯನ್ನೇನೋ ಹಾಕಬೇಕು. ಇಲ್ಲದಿದ್ದರೆ ಸರ್ಕಾರವನ್ನು ನಡಸುವುದಕ್ಕಾಗುವುದಿಲ್ಲ. ಆದರೆ ಯಾರಮೇಲೆ ತೆರಿಗೆ ಹಾಕಬೇಕು ಎಂಬುದನ್ನು ಆಲೋಚನೆ ಮಾಡಬೇಕು. ರೈತ ದೇಶದ ಬೆನ್ನು ಮೂಳೆ, ಅವನಿಗೆ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಎಲ್ಲರೂ ಭಾಷಣಗಳನ್ನು ಮಾಡುತ್ತಿದ್ದೇವೆ. ಆದರೆ ಅತಿ ಭಾರವಾದ ಈ ಸರ್‌ಚಾರ್ಜನ್ನು ಅವನ ಮೇಲೆ ಹೊರಿಸುತ್ತಿದ್ದೇವೆ. ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ, ಐದು ಮಣ ಹೊತ್ತಿರುವವನ ಮೇಲೆ ಇನ್ನು ಎರಡು ಮಣ ಹೆಚ್ಚು ಹೊರಿಸಬಹುದು. ಆದರೆ ಐದು ಮಣಕ್ಕೆ ಇನ್ನೈದು ಮಣ ಹಾಕಿದರೆ ಕಷ್ಟವಾಗುತ್ತದೆ. ಹೆಚ್ಚು ಭಾರವನ್ನು ಹೀಗೆ ರೈತನ ಮೇಲೆ ಹೊರಿಸಿದರೆ ಅವನ ಬೆನ್ನುಮೂಳೆ ಮುರಿಯುತ್ತದೆ. ಆದುದರಿಂದ ರೆವಿನ್ಯೂ ಮಂತ್ರಿಗಳಲ್ಲಿ ನನ್ನ ಮನವಿ ಇಷ್ಟೆ; ತೆರಿಗೆ ವಸೂಲು ಮಾಡಬೇಕಾದರೆ ಬೇರೆ ಮೂಲಗಳಿವೆ. ಅವುಗಳನ್ನು ಮೊದಲು tackle ಮಾಡಬೇಕು. ರೈತನಿಗೆ ತೆರಿಗೆ ಹಾಕುವ ಮೊದಲು ಅವನಿಗೆ ಬೇಕಾದ ಸೌಕರ್ಯಗಳನ್ನು ಮಾಡಿಕೊಡಬೇಕು. ನೀರಾವರಿ ಬಾವಿಗಳನ್ನೊದಗಿಸಬೇಕು. ಅವನಿಟ್ಟ ಬೆಳೆಗಳು ಅವನ ಕೈ ಸೇರುವಂತೆ ಅನುಕೂಲಗಳನ್ನೊದಗಿಸಬೇಕು. ಬೇಕಾದಾಗ ಮಳೆ ಬರುವುದಿಲ್ಲ. ಬೇಡವಾದಾಗ ಬರುತ್ತದೆ. ಇದಕ್ಕೆ ನಿವಾರಣೋಪಾಯವನ್ನೊದಗಿಸಿ ಅವನ ಉತ್ಪತ್ತಿಯನ್ನು ಹೆಚ್ಚಿಸಲು ಅವಕಾಶ ಕಲ್ಪಿಸಿ ಆಮೇಲೆ ತೆರಿಗೆ ಹಾಕಿದರೆ ತಡೆದುಕೊಳ್ಳಬಲ್ಲ.

ನಮ್ಮ ದೇಶದಲ್ಲಿ ನೋಡಿದರೆ ಕೆಲವು ಹಳ್ಳಿಗಳಲ್ಲಿ ಬಾವಿಗಳು ಇಲ್ಲ, ಸ್ಕೂಲುಗಳು ಇಲ್ಲ, ರಸ್ತೆಗಳು ಇಲ್ಲ, ವಿದ್ಯಾಭ್ಯಾಸ ಸೌಕರ್ಯಗಳಿಲ್ಲ—ಇಷ್ಟೆಲ್ಲಾ ತೊಂದರೆ ಇರುವಾಗ ರೈತನ ಮೇಲೆ ಪುನಃ ತೆರಿಗೆ ಹಾಕುವುದು ತುಂಬಾ ವಿಷಾದವಾಗಿದೆ. ಹಣ ಕಮ್ಮಿಯಾಗಿದೆ ಅದನ್ನು ಕೂಡಿಸಬೇಕು ಎಂದು ಸರ್ಕಾರ ಆಲೋಚಿಸುತ್ತಾ ಇದೆ. ಇದಕ್ಕೆ ಬೇಕಾದಷ್ಟು ಸೋರ್ಸಸ್ ಇವೆ. ಇಕಾನಮಿ ಮತ್ತು ರಿಸೋರ್ಸಸ್ ಕಮಿಟಿಯವರು ತಮ್ಮ ವರದಿಯಲ್ಲಿ ಹೇಳಿರುವ ಹಾಗೆ ಮಂತ್ರಿಮಂಡಲದ ಸಿಬ್ಬಂದಿ, ಅವರ ಪರ್ಸನಲ್ ಕ್ಲರ್ಕ್, ಗನ್‌ಮ್ಯಾನ್, ಸೆಕ್ಯೂರಿಟಿ ಆಫೀಸರ್—ಇವರುಗಳನ್ನೆಲ್ಲಾ ತೆಗೆಯಬೇಕು ಎಂದು ನನ್ನ ಅಭಿಪ್ರಾಯ. ಅವರೇನೂ ಮಂತ್ರಿಗಳನ್ನು ಸಂರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಬ್ರಹ್ಮ ನಮ್ಮ ಹಣೆಯಲ್ಲಿ ಬರೆದಿಟ್ಟಿದ್ದಾನೆ. ಪಿತಾಮಹ ಗಾಂಧೀಜಿಯನ್ನು ಯಾರೂ ಅಂತಹ ಸಾವಿನಿಂದ ತಪ್ಪಿಸಲಿಕ್ಕಾಗಲಿಲ್ಲ. ಇಂಥಾದ್ದರಲ್ಲೇ ಪ್ರತಿಯೊಬ್ಬನೂ ಸಾಯಬೇಕೆಂದು ಮನುಷ್ಯ ಹುಟ್ಟಿದಾಗಲೇ ಬ್ರಹ್ಮ ನಿರ್ಣಯ ಮಾಡಿದ್ದಾನೆ. ಆದ್ದರಿಂದ ಮೊದಲು ಅನಾವಶ್ಯಕವಾದ ಇಂತಹ ಸಿಬ್ಬಂದಿಯನ್ನೆಲ್ಲಾ ಕಡಿಮೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ. ಇದರ ಜೊತೆಗೆ ಲಂಚನಿರೋಧ ಶಾಖೆಯನ್ನು ಮೊದಲು ತೆಗೆಯಬೇಕು. ಈ ಶಾಖೆ ಎಂದಿಗೂ ಯಾರಿಗೂ ಲಾಭತರತಕ್ಕದ್ದು ಅಲ್ಲ. ಈ ಕರಪ್ಷನ್ ಇಲಾಖೆಯನ್ನು ನೋಡಿಕೊಳ್ಳಲು ಇನ್ನೊಂದು ಆಂಟಿ ಕರಪ್ಷನ್ ಇಲಾಖೆಯನ್ನು ತೆಗೆಯಬೇಕೆಂದು ಹೇಳಿರುವುದು ಸಾಧುವಲ್ಲ. ಈ ಲಂಚವಿರೋಧ ಶಾಖೆಯನ್ನು ಜಾಗ್ರತೆಯಾಗಿ ತೆಗೆಯಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ.

ಇನ್ನು ಎನ್. ಇ. ಎಸ್. ಬಗ್ಗೆ ಕೆಲವಾರು ವಿಚಾರಗಳನ್ನು ಹೇಳಬೇಕಾಗಿದೆ. ಅಲ್ಲಿನ water drinking scheme ಈಗ ಪೆಟ್ರೋಲ್ drinking scheme ಆಗಿದೆ. ಚೀಫ್ ಪ್ರೋಗ್ರಾಂಗಳನ್ನು ಹಾಕಿಕೊಂಡು ಸುಮ್ಮನೆ ಹೋಗಿಬರುತ್ತಿರುತ್ತಾರೆ. ಕೆಲಸವೇನೋ ಸಾಗದು. ಇದರಿಂದ ಮೂರುಕಾಸಿನ ಸೌಲಭ್ಯವೂ ರೈತನಿಗೆ ದೊರೆಯುತ್ತಾ ಇಲ್ಲ. ವಿಲೇಜ್ ಲೆವಲ್ ವರ್ಕರ್ಸ್, ಸೋಷಿಯಲ್ ವೆಲ್‌ಫೇರ್ ಆಫೀಸರ್, ಎಂಬುದಾಗಿ ಯಾರು ಇದ್ದಾರೆಯೋ ಅವರಿಂದ ಸಾಕಷ್ಟು ಕೆಲಸಗಳೇನೂ ಸಮರ್ಪಕವಾಗಿ ಆಗುತ್ತಾ ಇಲ್ಲ. ಆದ್ದರಿಂದ ಈ ಎನ್. ಇ. ಎಸ್. ಬ್ಲಾಕುಗಳಿಂದ ಕೋಟ್ಯಾಂತರ

(ಶ್ರೀ ಅಂದಾನಯ್ಯ)

ರೂಪಾಯಿಗಳು ಹಾಳಾಗಿ ಹೋಗುತ್ತಿವೆ. ಆದ್ದರಿಂದ ಈ ತುರ್ತು ಸಮಯದಲ್ಲಿ ಈ ಎನ್. ಇ. ಎಸ್. ಬ್ಲಾಕುಗಳನ್ನು ಕೂಡಲೇ ತೆಗೆಯಬೇಕೆಂದು ನಾನು ಸರ್ಕಾರದವರಲ್ಲಿ ಮನವಿಮಾಡುತ್ತೇನೆ.

ಇನ್ನು ಪಾನನಿರೋಧವನ್ನು ಮೊದಲು ಆಚರಣೆಗೆ ತರಬೇಕು. ಮಧ್ಯಪಾನವನ್ನು ಇಡೀ ದೇಶದಲ್ಲಿ ಸಂಪೂರ್ಣವಾಗಿ ತೆಗೆಯಬೇಕು. ಇದರಿಂದ ಕೋಟ್ಯಾಂತರ ರೂಪಾಯಿಗಳು ಬರುತ್ತವೆ. ರೈತನ ಮೇಲೆ ತೆರಿಗೆ ಹಾಕಿದರೆ 4 ಕೋಟಿ ರೂಪಾಯಿಗಳು ಬರುತ್ತವೆ ಎಂದು ಹೇಳುವುದಕ್ಕೆ ಬದಲಾಗಿ ಈ ಮಧ್ಯಪಾನವನ್ನು ತೆಗೆಯುವುದರಿಂದ ಮತ್ತು ಪಾನನಿರೋಧ ಶಾಸನವನ್ನು ಕಡ್ಡಾಯವಾಗಿ ಇಡೀ ದೇಶದಲ್ಲೆಲ್ಲಾ ಜಾರಿಗೆ ತರುವುದರಿಂದ ಲಂಪ್‌ಸಮ್ಮಾಗಿ ವಿಶೇಷವಾಗಿ ಹಣವನ್ನು ಕೂಡಿಸಬಹುದು. ಆ ರೀತಿ ಮಾಡದೆ ಸುಮ್ಮನೆ ಬಡಪಾಯಿ ರೈತನ ಮೇಲೆ ನಾನಾ ರೀತಿಯ ಕಂದಾಯಗಳನ್ನು ವಿಧಿಸುವುದು ಖಂಡಿತವಾಗಿ ನ್ಯಾಯವಾದುದಲ್ಲ. ಹೋತನ ಮೇಲೆಯೇ ಮಾರಿಯ ಕಣ್ಣು ಬಿದ್ದ ಹಾಗೆ ಇವರ ಕಣ್ಣು ಯಾವಾಗಲೂ ರೈತನ ಮೇಲೆಯೇ ಬಿದ್ದಿದೆಯೋ ಏನೋ ನನಗೆ ಅರ್ಥವಾಗಲಿಲ್ಲ.

ಶ್ರಿ ಎಂ. ವಿ. ಕೃಷ್ಣಪ್ಪ.—ನಾನು ಮಾರಿಯಲ್ಲ; ಬಕಾಸುರ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾರಿ-ಬಕಾಸುರ ಇಬ್ಬರೂ ಅಣ್ಣ ತಮ್ಮಂದಿರು ಇದ್ದ ಹಾಗೆಯೇ.

ಸರ್ಕಾರ ಕೆಲವು ತೆರಿಗೆಗಳನ್ನು ವಿಧಿಸುವ ಬಗ್ಗೆ ಏಕೋ ಬಹಳವಾಗಿ ಹಿಂಜರಿಯುತ್ತಿದೆ. Urban immovable property ಮೇಲೆ ತೆರಿಗೆಯನ್ನು ವಿಧಿಸುವ ಮಸೂದೆಯನ್ನು ಏನೋ ಮುಂದಕ್ಕೆ ಹಾಕುತ್ತಿದ್ದಾರೆ. ಅದನ್ನು ಜಾಗ್ರತೆಯಾಗಿ ಜಾರಿಗೆ ತಂದರೆ ವಿಶೇಷ ಹಣ ಸರ್ಕಾರಕ್ಕೆ ಉತ್ಪತ್ತಿಯಾಗುತ್ತದೆ. ಬೆಟ್ಟಿಂಗ್ ಟ್ಯಾಕ್ಸನ್ನು ಸಹ ಜಾಸ್ತಿಮಾಡಿದರೆ ಅದರಿಂದಲೂ ದುಡ್ಡು ಜಾಸ್ತಿ ಬರುತ್ತದೆ. ಅಂತಹ ಸೋರ್ಸಸ್‌ಗಳನ್ನು ಬಿಟ್ಟು ಬಡಪಾಯಿ ರೈತರ ಮೇಲೆ ಇಂತಹ ತೆರಿಗೆಗಳ ಹೊರೆಯನ್ನು ಹೇರುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಕೊನೆಯದಾಗಿ ಈ ಕಾಂಗ್ರೆಸ್ ಸರ್ಕಾರ ಇನ್ನು ಕೆಲವು ವರ್ಷಗಳು ಅಧಿಕಾರದಲ್ಲಿರಬೇಕೆಂಬ ಆಶೆ ಇದ್ದರೆ ಈ ತಿದ್ದುಪಡಿ ಮಸೂದೆಯನ್ನು ಕೂಡಲೇ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈ ತೆರಿಗೆ, ಬೆಟ್ಟವನ್ನು ಒಡೆದು ಇಲಿಯನ್ನು ಹಿಡಿಯುವ ಹಾಗೆ ಕಾಣುತ್ತದೆ. ಸರ್ಕಾರದವರು ಹಣವನ್ನು ಕೂಡಿಸಲಿಕ್ಕೆ ಬೇಕಾದಷ್ಟು ಸೋರ್ಸಸ್ ಇವೆ. ನ್ಯಾಯವಾಗಿ ಬಡ ರೈತರಿಗೆ ವಿಶೇಷವಾಗಿ ತೆರಿಗೆಗಳ ಭಾರ ಬೀಳದಂತೆ ಸರ್ಕಾರದವರು ಹೆಚ್ಚು ಹಣಗಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri B. R. SUNTHANKAR (Belgaum).—Mr. Speaker, I do not wish to oppose the Bill as a whole, but I will have to oppose certain aspects of the Bill. The system of land revenue in our country has become out-moded and out dated. It is recognised on all hands that it is inequitable and it is static for a number of years. Thirty years or more have elapsed since revision took place and changing of land revenue system is long overdue. There is a strong opinion in our country that this land revenue should be replaced by a more equitable, more scientific and more progressive measure of taxation. I do not wish to go into that now. I will limit my observations to certain aspects of land revenue. Land revenue was once the main source of revenue of the State exchequer. During the last 20 years it has receded into the background and other taxes like sales tax, motor vehicles tax, ect., have taken place of the land revenue. I say that this land revenue has become overdue because during the last 20 years prices have gone up by several times and vast changes have taken place in the agricultural economy of our country. Income from agricultural production has increased owing to the rise in prices. So, there should be no objection to raise land revenue to some extent. This Government was fighting shy to levy surcharge on land revenue and was depending more on the revision settlement. As has been pointed out by the A. G. R. committee while introducing the budget for 1958-59 the then Finance Minister said that the income under the head—land revenue- has almost become static and survey and settlement operations are long overdue. They generally take long time. In view of that most of the States have thought it fit to put surcharge on land revenue and we have to take steps to expedite survey and settlement. The other States as stated by the Finance Minister,

(Sri B. R. SUNTHANKAR)

have augmented their resources by levying surcharge on land revenue. But, this Government did not adopt that course. Instead of that they thought that revision settlement would be completed soon and that would augment the revenue or the resources of the State. But, unfortunately even though the revision settlement has been started six years back nothing has been done· Revision settlement has been done only in some zones and wherever this has been done, no action is taken by the Government. The Government is rather lethargic in this, matter. Even though the Government was fighting shy, they took a step to levy surcharge to the extent of 35 per cent and now this Bill replaces that percentage, and raises it to cent per cent. Under the impact of planning the Government has been forced to take recourse to surcharge of cent pee cent. As has been stated in ths statement of objects and reasony this surcharge is a temporare measure. I want to tell the house that this should not be an excusr to prolong the revision settlement operations· It is very right that surcharge has been levied to the extent of cent per cent but as the A.G.R. committee has recommended definitely settlement operations should be completed within one year. That is what I want to urge on the Government.

Then, Sir, the defect in this Bill is that there are disparities in the rate of assessment in the various regions in the Mysore and Bengalore Divisions.

MR. SPEAKER.—Is that not a matter pertaining to the amendment?

Sri B. R. SUNTHANKAR.—Yes, Sir. I will touch upon it at the amendment stage.

Taking this opportunity, I would bring to the notice of the Govt. that the land revenue arrears have been piling up in the State, as has been pointed out by the A. G. R. Committee Report. The outstandings at the end of 1958-59 were Rs. 1,59, 30,994, and there are heavy arrears in Gulburga Division and in the erstwhile Mysore Area. Govt. should make concentrated efforts to recover all these arrears that will give additional income and augment the resources of the Govt. With these words, I oppose the Bill.

† ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು.—ಸ್ವಾಮಿ, ದೇಶದ ಈಗಿದ ಪರಿಸ್ಥಿತಿಯಲ್ಲಿ ನಾವು ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕಾಗಿದ್ದರೆ ನಮಗೆ ಹಣದ ಅವಶ್ಯಕತೆಯೇನೋ ಬಹಳವಾಗಿದೆ. ಆದರೆ ಸರಕಾರದವರು ಎಲ್ಲವನ್ನೂ ಆಲೋಚನೆ ಮಾಡಿ ಕಡೆಗೆ ಈ ರೈತನು ಕೊಡಬೇಕಾದ ಕಂದಾಯವೇನಿದೆ ಅದನ್ನು ನೂರಕ್ಕೆ ನೂರರಷ್ಟು ಹೆಚ್ಚುಮಾಡಿ ಆ ಬರತಕ್ಕ ಹಣದಿಂದ ದೇಶದ ಅಭಿವೃದ್ಧಿ ಕಾರ್ಯವನ್ನು ಮಾಡಬೇಕಾಗಿದೆ. ಇದರ ವಿನಹ ಬೇರೆ ಪರಿಸ್ಥಿತಿ ಇಲ್ಲ ಎನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದಾರೆ ಎಂತ ಕಾಣುತ್ತಿದೆ. ಹಣಕಾಸಿನ ದೃಷ್ಟಿಯಿಂದ ನಮ್ಮ ಪರಿಸ್ಥಿತಿ ಉತ್ತಮವಾಗುತ್ತದೆಂದು ಹೇಳುವುದಾದರೆ ಆಗ ನಮಗೆ ಹಣದ ಅವಶ್ಯಕತೆ ಬಹುವಾಗಿರುತ್ತದೆ. ಆದರೆ ರೈತನ ಈಗಿನ ಪರಿಸ್ಥಿತಿಯೇನಾಗಿದೆ, ರೈತನ ಮೇಲೆ ಹೀಗೆ ಒಂದಕ್ಕೆ ಎರಡರಷ್ಟು ಕರ ಹಾಕಿದರೆ, ಅಷ್ಟನ್ನು ಕೊಡತಕ್ಕ ಶಕ್ತಿ ಆ ರೈತನಿಗಿದೆಯೇ ಎಂಬುದನ್ನೆಲ್ಲಾ ನಾವೀಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಈ ಮಾನ್ಯ ಸಭೆಯಲ್ಲಿ ನೂರಕ್ಕೆ 80ರಷ್ಟು ಜನ ಸದಸ್ಯರುಗಳು ರೈತ ಪ್ರತಿನಿಧಿಗಳಾಗಿ ಇಲ್ಲಿಗೆ ಆರಿಸಿ ಬಂದಿದ್ದಾರೆ. ಇವರೆಲ್ಲರಿಗೂ ಈ ದಿವಸ ಆ ರೈತನ ಪರಿಸ್ಥಿತಿ ಏನಾಗಿದೆ ಎಂಬುದು ಚೆನ್ನಾಗಿ ಗೊತ್ತಿದೆ. ರೈತನ ಸ್ಥಿತಿ ಪೂರಾ ಚಿಂತಾಜನಕವಾಗಿದೆ. ರೈತ ಪೂರಾ ಸಾಲ-ಸೋಲಗಳನ್ನು ಮಾಡಿ ತನ್ನ ಪೂರ್ವೀಕರು-ಹಿರಿಯರು ಸಂಪಾದಿಸಿಟ್ಟಿದ್ದ ಬಂಗಾರವನ್ನೆಲ್ಲ ಮಾರ್ವಾಡಿಗಳಲ್ಲಿ ಗಿರಿವಿ ಇಟ್ಟು ಸಾಲದುದಕ್ಕೆ ಅಲ್ಪಾವಧಿ, ದೀರ್ಘಾವಧಿ ಮತ್ತು ಮಿಾಡಿಯಂ ಸಾಲಸೋಲಗಳನ್ನು ಸಹ ತೆಗೆದುಕೊಂಡು ಅವನು ಬಹಳ ತೊಂದರೆಯಲ್ಲಿದ್ದಾನೆ. ಮೇಲಾಗಿ ಈಗಿನ ಲೇಬರ್ ಆಕ್ಟ್ ಪ್ರಕಾರಬೇರೆ ರೈತನಿಗೆ ತುಂಬಾ ಕಷ್ಟ ಬಂದಿದೆ. ರೈತನು ಈಗಾಗಲೇ ಇನ್‌ಕಂಟ್ಯಾಕ್ಸ್ ಸೂಪರ್‌ಟ್ಯಾಕ್ಸ್ ಇತ್ಯಾದಿ ಅನೇಕ ರೀತಿಯ ತೆರಿಗೆಗಳನ್ನು ಕೊಡಬೇಕಾದ ಪರಿಸ್ಥಿತಿ ಆತನಿಗೆ ಬಂದಿದೆ. ರೈತನ ಪರಿಸ್ಥಿತಿ ಹೀಗಾಗಿರುವಾಗ ದೇಶದ ದೇಶಾಭಿವೃದ್ಧಿಯ ಕಡೆಗೆ ನಾವು ಬಹಳ ಪ್ರಾಮುಖ್ಯತೆಯನ್ನು ಕೊಡಲೇಬೇಕು. ಆದರೆ ರೈತನಿಗೆ ಈ ತೆರಿಗೆಗಳನ್ನು ಹೊರತಕ್ಕ ಶಕ್ತಿಯಿಲ್ಲ. ಆದುದರಿಂದ ನಾವೀಗ ಬೇರಾವುದಾದರೂ ರೀತಿಯಿಂದ ಈ ವರಮಾನವನ್ನು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಬರಮಾಡಿಕೊಳ್ಳಲು ಮಾರ್ಗವನ್ನು ಹುಡುಕತಕ್ಕ ಕಾಲ ಬಂದಿದೆ. ಆದರೆ ಈ ದಿವಸ ಎಲ್ಲ ರೈತರಿಗೂ ನೂರಕ್ಕೆ ನೂರು ಕಂದಾಯ ಜಾಸ್ತಿ ಮಾಡಬೇಕೆಂದು ಹೇಳುತ್ತಿರುವಾಗ ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಸರ್ಕಾರದವರೇನು ಅನುಕೂಲ ಮಾಡಿಕೊಟ್ಟಿದ್ದಾರೆಂಬುದನ್ನು ಗಮನಿಸಿದರೆ ಅಲ್ಲಿ ನೂರಕ್ಕೆ 40 ಎಕರೆ ಮಾತ್ರ ತರಿ ಸಾಗುವಳಿಗೆ ಅನುಕೂಲವಿದೆ. ಅಂಥಾ ಪರಿಸ್ಥಿತಿಯಲ್ಲಿ ಅಲ್ಲಿಯ ಜನ ಈ ವ್ಯವಸಾಯವನ್ನು ನಡೆಸಿಕೊಂಡು ಹೋಗಬೇಕಾಗಿದೆ. ಇನ್ನು ಅನೇಕ ರೈತರು ಕೇವಲ ಮಳೆ ಮೋಡವನ್ನೇ ನಂಬಿಕೊಂಡು ಬೇಸಾಯ ಮಾಡುತ್ತಿದ್ದಾರೆ. ಅಂಥವರು ಎಕರೆಗೆ 2—3 ಪಲ್ಲಕ್ಕಿಂತ ಜಾಸ್ತಿ ಬೆಳೆಯುವುದಿಲ್ಲ. ಅಂಥವರೂ ಕೂಡ ನೂರಕ್ಕೆ ನೂರು ಪಾಲು ಜಾಸ್ತಿ ಕಂದಾಯ ಕೊಡಬೇಕೆಂದರೆ ಅವರಿಗೆ ಅದು ಸಾಧ್ಯವೇ ಎಂಬುದನ್ನು ಆಲೋಚಿಸಬೇಕು. ನಾವು ಇಲ್ಲಿಗೆ ರೈತರ ಪ್ರತಿನಿಧಿಗಳಾಗಿ ಬಂದು ರೈತರಿಗೆ ಒಳ್ಳೆಯದನ್ನು ಮಾಡಬೇಕಾದ್ದು ನಮ್ಮ ಕರ್ತವ್ಯ. ಈ ದಿವಸ ರೈತನು ಎಲ್ಲಿ ಸಾಲ ಸಿಗುತ್ತೆಂದರೆ ಅಲ್ಲಿ ಸಾಲ ಮಾಡಿಬಿಡುತ್ತಾನೆ. ಸರ್ಕಾರದವರು ಕೊಡತಕ್ಕ ಲಾಂಗ್ ಟರ್ಮ್ ಲೋನ್, ಷಾರ್ಟ್ ಟರ್ಮ್ ಲೋನ್, ಮೀಡಿಯಂ ಲೋನ್ ಈ ಸಾಲಗಳನ್ನೂ ತೆಗೆದುಕೊಂಡು, ಸಾಲದ್ದಕ್ಕೆ ಕಾಪನ್ನು ಹೈಪಾತಿಕೇಟ್ ಮಾಡಿ ಲೋನು ಎತ್ತಿದ್ದಾನೆ. ಮೊನ್ನೆ ಈ ಸಾಲದ ವಸೂಲಿಗಾಗಿ ಚಿಕ್ಕಮಗಳೂರು ತಾಲ್ಲೂಕು ಲಕ್ಕೇಹಳ್ಳಿ ಹೋಬಳಿಯಲ್ಲಿ ಜಿಲ್ಲಾಧಿಕಾರಿಗಳು ಒಬ್ಬ ರೈತನ ಜಮೀನನ್ನು ಹರಾಜು ಹಾಕಿದಾಗ ಆದನ್ನು ಬಿಡ್ ಮಾಡಲು ಜನಗಳ್ಯಾರೂ ಮುಂದೆ ಬರಲಿಲ್ಲವಂತೆ. ಆ ರೈತರ ಪರಿಸ್ಥಿತಿ ಹೀಗಿರುವಾಗ ಅವರನ್ನು ಈ ತೆರಿಗೆಯನ್ನು ಹೇಗೆ ಕೊಟ್ಟಾರೆಂಬುದನ್ನು ನಾವು ಆಲೋಚನೆ ಮಾಡಬಹುದು. 1957 ರಿಂದ 1962 ರ ತನಕ ನಮ್ಮ ಜಿಲ್ಲೆಯಲ್ಲಿ ಹಳ್ಳಿ ರೈತರ ಏಳಿಗೆಗಾಗಿ ಸರ್ಕಾರದವರೆಷ್ಟು ಮಟ್ಟಿಗೆ ಮುತುವರ್ಜಿ ವಹಿಸಿದ್ದಾರೆಂಬುದನ್ನು ಪರಿಶೀಲಿಸಿದರೆ ಹಳ್ಳಿಯ ರೈತರಿಗೆ ಕೆರೆ, ಕಾಲುವೆ, ನಾಲಾ ಇತ್ಯಾದಿ ಸೌಕರ್ಯಗಳನ್ನು ಅವಲೋಕಿಸಿದರೆ ನಮ್ಮ ಜಿಲ್ಲೆಯ ದಾಸರಹಳ್ಳಿ ಕೆರೆಯ ಕೆಲಸವನ್ನು ಇನ್ನೂ ಕೈಗೊಂಡಿಲ್ಲ. ಈ ಕೆರೆಯ ಕೆಲಸ 1956ರಿಂದಲೂ ಹಾಗೇ ನಿಂತು ಬಂದಿದೆ. ಅಯ್ಯನಕೆರೆ ಹೂಳು ತುಂಬಿ ಹೋಗಿದೆ. ಅದರ ದುರಸ್ತಿಯಾಗಿಲ್ಲ. ನಾವೀ ದಿವಸ ಆ ರೈತರ ಹತ್ತಿರ ಹೋಗಿ ನೀವು ಹೆಚ್ಚು ಆಹಾರ ಬೆಳೆಯಿರಿ ಎಂತ ಹೇಳಿದರೆ, ಅವರು "ನಾವು ಕಂದಾಯ ಕೊಡುತ್ತಿದ್ದೇವೆ, ಆದಾಗ್ಯೂ ನೀವೇನು ನಮಗೆ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೀರಿ" ಎಂತ ಕೇಳುತ್ತಾರೆ. ಆದುದರಿಂದ ನಾವೀಗ ನಮ್ಮ ಈ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಬೇರೆ ಇನ್ನಾವ ಮಾರ್ಗವೂ ಇಲ್ಲವೇ ಎಂಬುದನ್ನು ಪರಿಶೀಲಿಸಿ ನೋಡಬೇಕಾದ ಪರಿಸ್ಥಿತಿ ಬಂದಿದೆ. ಆದರೆ ಈಗಾಗಲೆ ಕೆಲವರು ಹೇಳಿದಂತೆ ನಮ್ಮ ಇಂದಿನ ಪಾನನಿರೋಧ ಪದ್ಧತಿಯಿಂದ ಯಾರಿಗೂ ಕ್ಷೇಮವಿಲ್ಲ. ಸರ್ಕಾರಕ್ಕೆ ಬರುತ್ತಿದ್ದ 8—10 ಕೋಟಿ ರೂ.ಗಳ ಆದಾಯವೂ ತಪ್ಪಿಹೋಯಿತು. ಇತ್ತ ಜನರ ಆರೋಗ್ಯವೂ ಕೆಟ್ಟಿತು. ಇದರಿಂದ ನಮ್ಮ ಪೋಲೀಸ್ ಇಲಾಖೆಗಿದ್ದ ಗೌರವವೂ ಹೋಯಿತು. ಇಂಥಾ ಅನಿವಾರ್ಯ ಸಂದರ್ಭದಲ್ಲಿ ನಾವೇಕೆ ಈ ವಿಚಾರವನ್ನು ಪುನರ್ಪರಿಶೀಲನೆ ಮಾಡಬಾರದು? ಇವೆಲ್ಲವನ್ನೂ ಆಲೋಚನೆ ಮಾಡಿದರೆ ನಮಗೆ ಇಂಥಾ ತೆರಿಗೆಯನ್ನು ಹಾಕದೆಯೇ ನಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಎಷ್ಟೋ ಮಾರ್ಗಗಳಿವೆ. ಆದುದರಿಂದ ನಾನೀ ಸಂದರ್ಭದಲ್ಲಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸರ್ಕಾರದವರು ಬೇರೇನಾದರೂ ಉದ್ಯಮಗಳನ್ನು ಆಲೋಚನೆ ಮಾಡಬೇಕೆಂದು ಹೇಳಿ ಈ ಮಸೂದೆಗೆ ನನ್ನ ಬೆಂಬಲವನ್ನಿತ್ತು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಪರಮೇಶ್ವರಪ್ಪ (ಹೊನ್ನಾಳಿ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದಿರತಕ್ಕ ರೆವಿನ್ಯೂ ಸರ್‌ಛಾರ್ಜ್ ಅಮೆಂಡ್ ಬಿಲ್ಲನ್ನು ನಾವು ಈ ದಿವಸ ವಿಚಾರ ಮಾಡಿ ನೋಡಿದ್ದೇ ಆದರೆ ಈ ಬಗ್ಗೆ ಏನು ಹೇಳುವುದಕ್ಕೂ ಬಹಳ ವಿಷಾದವಾಗುತ್ತದೆ. ಏಕೆಂದರೆ ಮಾನ್ಯ ಕಂದಾಯದ ಮಂತ್ರಿಗಳು ಈ ಮಸೂಧೆಯನ್ನು ತಂದಿರುವುದರ ಉದ್ದೇಶವೇನೆಂಬುದನ್ನು ವಿಶದಪಡಿಸಿದ್ದಾರೆ. ಅದೇನೆಂದರೆ ನಮ್ಮ ಸರ್ಕಾರದವರಿಗೆ ಈಗ ಕೈಗೊಂಡಿರುವ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಅದಕ್ಕಾಗಿ ನಮಗೀಗ ನಾಲ್ಕು ಕೋಟಿ ರೂಪಾಯಿಗಳ ಖೋತಾ ಬಿದ್ದಿದೆ. ಅದಕ್ಕಾಗಿ ಈಗ ಈ ಬಿಲ್ಲನ್ನು ತರಲಾಗಿದೆ ಎಂದು ಹೇಳಿದ್ದಾರೆ. ಆದರೆ ಈ ಮಸೂದೆಯಲ್ಲಿ ಕೊಟ್ಟಿರತಕ್ಕ Statement of Objects & Reasions ನಲ್ಲಿ ಏನೋ ಒಂದು ಉದ್ದೇಶ ಹೇಳಿದ್ದಾರೆ. ಈ ದಿವಸ ಈ ಸರ್‌ಛಾರ್ಜನ್ನು ನಾವು ನಮ್ಮ ಭೂಕಂದಾಯದ ಮೇಲೆ ವಿಧಿಸಬೇಕಾಗಿದೆ. ಈ ದಿವಸ ನಮ್ಮ ರಾಜ್ಯದಲ್ಲಿ ಭೂಮಿಯನ್ನೇ ಅವಲಂಬಿಸಿತರಕ್ಕ ಜನರ ಸಂಖ್ಯೆ ಶೇಕಡಾ 70ರಷ್ಟು ಇದೆ. ಆದಾಗ್ಯೂ ನಮ್ಮ ದೇಶದ ಆಹಾರದ ಪರಿಸ್ಥಿತಿಯೇನಾಗಿದೆಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಇಡೀ ದೇಶಕ್ಕೆ ಆಹಾರವನ್ನು ಪೂರೈಸತಕ್ಕ ಹೊಣಗಾರಿಕೆಯೂ ಸಹ ನಮ್ಮ ರೈತರ ಮೇಲೆ ಬಿದ್ದಿದೆ. ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾವು ಆ ರೈತನ ಮೇಲೆ ಇಂಥ ಒಂದು ತೆರಿಗೆಯನ್ನು ಹಾಕಿ ಅವನ ಉತ್ಸಾಹವನ್ನು ಕುಗ್ಗಿಸುವುದು ಸರಿಯಲ್ಲವೆಂದು ನಾನೀ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಮಾನ್ಯ ಕಂದಾಯದ ಮಂತ್ರಿಗಳು ಮಾತನಾಡುತ್ತಿರುವಾಗ ಅವರು ರೈತರ ಹಿತಸಾಧನೆಗಾಗಿ ಬಹಳ ಪ್ರಯತ್ನಗಳನ್ನು ಮಾಡುತ್ತಿರುವುದಾಗಿಯೂ, ಆ ರೈತರ ಸಂಕಟವನ್ನು ನೋಡಿದರೆ ಅವರಿಗೆ ಬಹಳ ಮರುಕವಾಗುತ್ತದೆಂದೂ ಹೇಳಿದರು. ಆದರೆ ಅವರು ಬಾಯಿನಲ್ಲಿ ಅಂಥಾ ಮಾತುಗಳನ್ನಾಡಿ ಕಾರ್ಯದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಇಂಥಾ ಮಸೂದೆಯನ್ನು ತರುತ್ತಿರುವುದನ್ನು ನೋಡಿದರೆ ಅವರ ಉದ್ದೇಶವೇ ಬೇರೆ...

ಅಧ್ಯಕ್ಷರು.—ಸರ್ಕಾರದವರು ಬಾವಿಗಳನ್ನು ತೆಗೆಸಲು ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ?

ಶ್ರೀ ಡಿ. ಪರಮೇಶ್ವರಪ್ಪ.—ಅದು ಸಾಲ, ಅದಕ್ಕೆ ಬಡ್ಡಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು.—ಸಬ್‌ಸಿಡಿ ಕೊಡುತ್ತಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿ ಒಂದಕ್ಕೆ 500 ರೂ.ಗಳನ್ನು ಸಬ್‌ಸಿಡಿ ರೂಪದಲ್ಲಿ ಕೊಡಲಾಗುತ್ತಿದೆ.

ಶ್ರೀ ಡಿ. ಪರಮೇಶ್ವರಪ್ಪ.— ದೇಶಕ್ಕೆ ಅನ್ನದಾನ ಮಾಡತಕ್ಕವರ ಮೇಲೆ ಗದಾಪ್ರಹಾರ ಮಾಡತಕ್ಕ ಇಂಥಾ ಮಸೂದೆಯನ್ನು ತರತಕ್ಕ ಸಾಹಸಕ್ಕೆ ಇವರು ಹೇಗೆ ಕೈ ಹಾಕಿದರೋ ತಿಳಿಯದಾಗಿದೆ. ಇದಕ್ಕಾಗಿ ನಾನು ಬಹಳ ವಿಷಾದಪಡುತ್ತೇನೆಂದು ಈ ಮಾನ್ಯ ಸಭೆಗೆ ತಿಳಿಸಬೇಕಾಗಿದೆ. ನಮ್ಮ ದೇಶದಲ್ಲಿರತಕ್ಕ ರಾಜಕೀಯ ಪಕ್ಷಗಳಲ್ಲಿ ಚೀಣಿಯರನ್ನು ಹೊಡೆದೋಡಿಸತಕ್ಕ ಬಗ್ಗೆ ಯಾವ ಒಂದು ಭಿನ್ನಾಭಿಪ್ರಾಯವೂ ಇಲ್ಲದೆ ಇಡೀ ದೇಶದ ಜನತೆಯು ಒಂದು ತಿಳಿಯಾದ ವಾತಾವರಣದಲ್ಲಿರುವಾಗ, ಇಂಥಾ ನಿರ್ಮಲವಾದ ವಾತಾವರಣವನ್ನು ಇಂಥಾ ಒಂದು ಅವಸರದ ಮಸೂದೆಯನ್ನು ತಂದು ಅದನ್ನು ಕಲುಷಿತವಾಗಿ ಮಾಡುವುದು ಸರಿಯಾದುದಲ್ಲ ಎಂದು ನಾನು ತಿಳಿಸದೆ ವಿಧಿಯಿಲ್ಲ. ಮಾನ್ಯ ಮಂತ್ರಿಗಳು ಮತ್ತೊಮ್ಮೆ ಈ ಮಸೂದೆಯನ್ನು ಬಹಳ ಎಚ್ಚರದಿಂದ ಪರಿಶೀಲಿಸಬೇಕಾಗಿತ್ತೆಂದು ತಿಳಿಸಲಿಚ್ಛಿಸುತ್ತೇನೆ.

ಈಗ ಮೊನ್ನೆ ತಾನೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜ್ ಮಸೂದೆಯ ಮೇಲೆ ಮಾತನಾಡುತ್ತಾ ನಾನು ಚೀಣಾ ದೇಶಕ್ಕೆ ಹೋಗಿದ್ದೆ. ಅಲ್ಲಿ ರೈತರ ಪರಿಸ್ಥಿತಿಯನ್ನು ನೋಡಿದೆ. ಅಲ್ಲಿ ರೈತರಿಗೆ ಸ್ವಲ್ಪವೂ ಲಿಬರ್ಟಿಯಿಲ್ಲ. ಸ್ವಾತಂತ್ರ್ಯವಿಲ್ಲ. ನಮ್ಮ ದೇಶದಲ್ಲಿ ರೈತರಿಗೆ ಸ್ವಾತಂತ್ರ್ಯ ಇದೆಯೆಂದು ನಮ್ಮ ದೇಶದ ರೈತರಿಗೂ, ಚೀಣಾ ದೇಶದ ರೈತರಿಗೂ ಇರತಕ್ಕ ವ್ಯತ್ಯಾಸವನ್ನು ಹೇಳಿದರು. ಆದು ಒಂದು ವಿಚಾರವನ್ನು ನಾವು ಜ್ಞಾಪಕದಲ್ಲಿಡಬೇಕು. ಏತಕ್ಕೆಂದರೆ ಅಲ್ಲಿ ಸಾಮಾನ್ಯವಾಗಿ ರೈತರಿಗೆ ಸ್ವಾತಂತ್ರ್ಯವಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಇಲ್ಲಿ ನಮ್ಮ ದೇಶದಲ್ಲಿ ರೈತರಿಗೆ ಎಷ್ಟರಮಟ್ಟಿಗೆ ಸ್ವಾತಂತ್ರ್ಯ ಇದೆ ಎಂದು ನೋಡಿದರೆ ನಿಜವಾಗಿಯೂ ಕೂಡ ಇವೊತ್ತಿನ ದಿವಸ ರೈತನಿಗೆ ಯಾವ ಸ್ವಾತಂತ್ರ್ಯವೂ ಇಲ್ಲ ಎಂದು ಹೇಳಬೇಕಾಗುತ್ತದೆ. ಈಗ ಆನೇಕ ತೆರಿಗೆಗಳನ್ನು ಕೊಡಬೇಕಾದ ಪರಿಸ್ಥಿತಿ ಬಂದಿದೆ. ಚೈನಾ ದೇಶದ ಮೇಲೆ ಈ ದಿವಸ ಯುದ್ಧವನ್ನು ಆರಂಭ ಮಾಡಿದರೆ, ತೆರಿಗೆಯ ಯುದ್ಧವನ್ನು ಎದುರಿಸಬೇಕಾದ ಪರಿಸ್ಥಿತಿ ಒದಗಿದೆ. ಶ್ರೀಮಾನ್ ಗೋಪಾಲಗೌಡರು ಮೊನ್ನೆ ತಾನೆ ಈ ಮಸೂದೆಯ ಮೇಲೆ ಮಾಡನಾಡುತ್ತಾ ನಮ್ಮ ಸರ್ಕಾರಕ್ಕೆ ಯಾವ ರೀತಿಯಿಂದ ಹಣವನ್ನು ಕೊಟ್ಟರೂ ಸಾಲುವುದಿಲ್ಲ ಪರದೇಶದಿಂದ ಸಾಲ ತರುತ್ತಾರೆ. ತೆರಿಗೆಗಳ ಮುಖಾಂತರ ಅನೇಕ ತೆರಿಗೆಗಳನ್ನು ಕೊಟ್ಟಾಗ್ಯೂ ಕೂಡ ಸಾಕಾಗುವುದಿಲ್ಲ. ಸಾರ್ವಜನಿಕರಿಂದಲೂ ಸಾಲವನ್ನು ಎತ್ತಿ ಹಣವನ್ನು ಪಡೆಯುತ್ತಾರೆ. ಆದಾಗ್ಯೂ ಕೂಡ ಅದು ಸಾಕಾಗುವುದಿಲ್ಲ ಎಂದು ಹೇಳಿದರು. ಇದನ್ನು ನೋಡಿದರೆ ನಮ್ಮ ಸರ್ಕಾರವನ್ನು ಬಕಾಸುರ ಎಂದು ಹೇಳಬಹುದು ಎಂದು ನಾನು ಹೇಳುತ್ತೇನೆ. ದಿನೇ ದಿನೇ ತೆರಿಗೆಯನ್ನು ಹೆಚ್ಚು ಮಾಡುತ್ತಾ ಹೋಗುತ್ತಿದ್ದಾರೆ. ರೈತನೇ ದೇಶದ ಬೆನ್ನು ಮೂಳೆಯೆಂದು ಹೇಳಿಕೊಳ್ಳುತ್ತಾ ಬಂದರೇ ಹೊರತು ನಿಜವಾದ ಪ್ರೋತ್ಸಾಹವನ್ನು ಕೊಡತಕ್ಕಂಥಾ ದಾರಿಯಲ್ಲಿ ಹೋಗಿಲ್ಲ. ' ಈಗ ಇಂಥಾ ಒಂದು ಆತುರವಾದ ಮಸೂದೆಯನ್ನು ಸರ್ಕಾರ ಈ ಸಭೆಯ ಮುಂದೆ ತಂದು ರೈತರ ಉತ್ಸಾಹಕ್ಕೆ ಕೂಡ ಕೊಡಲಿಯ ಪೆಟ್ಟನ್ನು ತರುತ್ತಾರೆ ಎಂದು ಹೇಳಿದರೆ ಅದರಲ್ಲೇನೋ ಸತ್ಯವಿದೆ ಎಂದು ನಾವೆಲ್ಲ ಒಪ್ಪಿಕೊಳ್ಳಬೇಕಾಗುತ್ತದೆ. ಈಗ ತುರ್ತುಪರಿಸ್ಥಿತಿ ಒದಗಿದೆ, ದೇಶದಲ್ಲಿ ಹಣದ ಕೊರತೆ ಇದೆ, ಇಂಥಾ ಪರಿಸ್ಥಿತಿಯಲ್ಲಿ ಯುದ್ಧವನ್ನು ಮತ್ತು ತುರ್ತು ಎದುರಿಸಲು ಹಣದ ಆವಶ್ಯಕತೆ ಹೆಚ್ಚಾಗಿದೆಯೆಂದು ತೆರಿಗೆಯ ರೂಪವಾಗಿ ಹಣವನ್ನು ಸಂಪಾದನೆ ಮಾಡುವುದಕ್ಕೆ ಹೊರಟಿದ್ದಾರೆ. ಈ ಸಂದರ್ಭದಲ್ಲಿ ನಾನು ಕೆಲವು ನಿದರ್ಶನಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸಾಮಾನ್ಯವಾಗಿ ನಾವೆಲ್ಲಾ ತಿಳಿದಿರುವ ಹಾಗೆ ಯಾವದೇಶ ಪ್ರಜಾಪ್ರಭುತ್ವವನ್ನು ಸರಿಯಾಗಿ ಪಾಲನೆ ಮಾಡಿಕೊಂಡು ಬರುತ್ತದೋ ಅಂಥಾ ಯಾವ ದೇಶದಲ್ಲೇ ಆಗಲಿ, ಆಡಳಿತ ಪಕ್ಷದವರು ವಿರೋಧ ಪಕ್ಷದವರ ಸಲಹೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ದೇಶದ ಸಮಸ್ಯೆಗಳನ್ನು ಒಬ್ಬರಿಗೊಬ್ಬರ ಸಹಕಾರದಿಂದ ಎದುರಿಸುತ್ತಾರೆ. ಗ್ರೇಟ್ ಬ್ರಿಟನ್‌ನಲ್ಲಿ, ಮಹಾ ಯುದ್ಧವಾದಂಥಾ ಸಮಯದಲ್ಲಿ ತೆರಿಗೆಯ ಭಾರವನ್ನು ಹೆಚ್ಚಿಗೆ ಮಾಡಲಿಲ್ಲ. ಆದರೆ ನಮ್ಮ ಸರ್ಕಾರದವರು ಯುದ್ಧದ ನೆಪವನ್ನು ಹಾಕಿಕೊಂಡು ಬಡ ರೈತರ ಮೇಲೆ ಕೈಹಾಕಿ ಒಂದಕ್ಕೆ ಎರಡರಷ್ಟು ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜ್ ಹಾಕುವುದನ್ನು ನೋಡಿದರೆ ಇದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ಒಂದು ಅವಹೇಳನ ಮಾಡಿದಂತೆ ಎಂದು ನನಗೆ ಭಾಸವಾಗುತ್ತದೆ. ಅದೂ ಅಲ್ಲದೆ ಈಗ ತಂದಿರತಕ್ಕ ಮಸೂದೆಯನ್ನು ನೋಡುವುದಾದರೆ ಇದರಲ್ಲಿ ಕೆಲವು ಡಿಫೆಕ್ಟ್ಸ್ ಇವೆಯೆಂದು ನಾನು ಹೇಳಬೇಕಾಗಿದೆ. ಇದರಲ್ಲಿ ಮೊದಲನೆಯ ಡಿಫೆಕ್ಟ್ಸ್ ಏನೆಂದರೆ ಇದು ಫೈನಾನ್ಸ್ ಆ್ಯಸ್ಪೆಕ್ಟ್ ಆಗಿರುವುದರಿಂದ ಇದಕ್ಕೆ ಗೌರ್ನರ್ ಅವರ ರೆಕಮೆಂಡೇಶನ್ ಪಡೆಯಬೇಕಾಗಿತ್ತು. ನಂತರ ಇದನ್ನು ಈ ಸಭೆಯ ಮುಂದೆ ಮಂಡಿಸಲ್ಪಡಬೇಕಾಗಿತ್ತು.

MR. SPEAKER.—It has already been mentioned on the floor of the House that it has been obtained.

ಶ್ರೀ ಡಿ. ಪರಮೇಶ್ವರಪ್ಪ.— ಈ ಮಸೂದೆಯನ್ನು ತಂದಿರತಕ್ಕಂಥಾ ಕ್ರಮವನ್ನು ನೋಡಿದರೆ ಇದು ಪದ್ಧತಿಗೆ ಅನುಸಾರವಾಗಿಲ್ಲ. ಯಾವ ಒಂದು ದೇಶದಲ್ಲೇ ಆಗಲಿ ಯಾವುದಾದರೊಂದು ಕಾನೂನು ರಚನೆಯಾಗಬೇಕಾದರೆ ಸಾಮಾನ್ಯವಾಗಿ ಹಿಂದಿನ ಒಂದು ಅನುಭವ ಆದರಿಂದ ಆಗತಕ್ಕಂಥ ಸಾಧಕ ಭಾಧಕಗಳು ಮತ್ತು ಆದರ ವಿಚಾರದಲ್ಲಿ ಕೂಲಂಕುಷವಾಗಿ ವಿಮರ್ಶೆ ಮಾಡಿದ ನಂತರ ಅದನ್ನು ಈ ಸಭೆಯ ಮುಂದೆ ಇಟ್ಟರೆ ಅದು ನಿಜವಾಗಿಯೂ ಕೂಡ ಬಹಳ ಕಾಲ ನಿಲ್ಲತಕ್ಕ ಮತ್ತು ಜನಾಭಿಪ್ರಾಯವನ್ನು ಪಡೆಯುತ್ತ ಕಾನೂನು ಆಗುತ್ತದೆಯೇ ಹೊರತು ಸುಮ್ಮಗೆ ಅವಸರ ಅವಸರವಾಗಿ ಮಸೂದೆಯನ್ನು ತಂದರೆ ಆದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಹಿಂದಿನ ವರ್ಷಗಳ ನೆನಪನ್ನು ಮಾಡಬೇಕು.

(ಶ್ರೀ ಡಿ. ಪರಮೇಶ್ವರಪ್ಪ)

ಇನ್ನೊಂದು ವಿಚಾರವನ್ನು ಈಗ ತಾನೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು. ಅದೇನೆಂದರೆ ರೆವಿನ್ಯೂ ಕೋಡಿನ 112ನೇ ಸೆಕ್ಷನ್ ಅನ್ನು ಈ ಸಭೆಯ ಗಮನಕ್ಕೆ ತಂದು "ಸರ್ಕಾರದವರು ಕಂದಾಯವನ್ನು ಹೆಚ್ಚಿಸಬೇಕಾದರೆ ಯಾವ ಕ್ರಮವನ್ನು ಅನುಸರಿಸುತ್ತಾರೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಹಾಗೆಯೇ ರೆವಿನ್ಯೂ ಕೋಡಿನ 112ನೇ ಸೆಕ್ಷನಿನ ಪ್ರಕಾರ ಕಂದಾಯವನ್ನು ಹೆಚ್ಚಿಸಬೇಕಾದರೆ ಏನು ನಿಭಂದನೆಗಳು, ನಿಯಮಗಳಿವೆ ಎಂಬುದನ್ನು ಈಗ ತಾನೆ ಮಾನ್ಯ ಸದಸ್ಯರಾದ ಜಿ. ವೆಂಕಟೇಗೌಡರು ರೆಲವೆಂಟ್ ಪೋರ್ಷನ್ ಅನ್ನು ಓದಿ ಹೇಳಿದರು. ಈಗ ಸರ್ಕಾರದವರು ಏನು ತೆರಿಗೆಯನ್ನು ಹಾಕುತ್ತಿದ್ದಾರೋ ಅದನ್ನು ಹೆಚ್ಚು ಮಾಡುತ್ತಿಲ್ಲ. ಅದನ್ನು ದ್ವಿಗುಣ ಮಾಡುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಈ ಬಗ್ಗೆ ಸರ್ಕಾರದವರು ರೈತರ ಒಂದು ಅಭಿಪ್ರಾಯವನ್ನು ಕ್ರೋಢೀಕರಿಸಿದನಂತರ ಅದನ್ನು ಪಬ್ಲಿಷ್ ಮಾಡಿ, ಇದರ ಬಗ್ಗೆ ನಮ್ಮ ಅಭಿಪ್ರಾಯಗಳು ಏನು, ಜನತೆಯ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳಬೇಕಾಗಿತ್ತು. ಆರೀತಿ ಮಾಡದೆ ಹಣದ ಕೊರತೆ ಇದೆಯೆಂದು ಈರೀತಿ ಇಂಥಾ ಒಂದು ಆತುರವಾದ ಮಸೂದೆಯನ್ನು ತರುವುದರಿಂದ ದೇಶದಲ್ಲಿ ಕ್ರಾಂತಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ.

ಇಂಥಾ ಒಂದು ಪರಿಸ್ಥಿತಿಯಲ್ಲಿ ನಾವು ನಮ್ಮ ಖರ್ಚನ್ನು ಯಾವರೀತಿ ಸರಿತೂಗಿಸಿಕೊಂಡು ಹೋಗಬೇಕಾಗಿದೆ, ಮತ್ತು ಸರ್ಕಾರದಲ್ಲಿ ಯಾವ ರೀತಿ ಖರ್ಚನ್ನು ಕಡಿಮೆಮಾಡಿ ಮಿತವ್ಯಯ ಮಾಡಬೇಕು ಎನ್ನತಕ್ಕಂಥ ವಿಚಾರಗಳನ್ನು ನಮ್ಮ ಸ್ನೇಹಿತರನೇಕರು ಹೇಳಿದ್ದಾರೆ. ಅದೂ ಅಲ್ಲದೆ ಸರ್ಕಾರದವರು ಈಗ ಮುಂದುವರಿಸಿಕೊಂಡು ಹೋಗತಕ್ಕ ಪ್ರೊಹಿಬಿಷನ್ ಪಾಲಸಿಯಿಂದ ಯಾವ ವಿಧವಾದಂತಹ ಉಪಯೋಗವೂ ಆಗುವುದಿಲ್ಲ. ಈಗ ನಮ್ಮ ದೇಶದಲ್ಲಿ ಪಾನ ನಿರೋಧವನ್ನು ರದ್ದುಮಾಡುವುದಾದರೆ ಅದರಿಂದ ನಮ್ಮ ಸರ್ಕಾರಕ್ಕೆ ಸುಮಾರು 10 ಕೋಟಿ ರೂಪಾಯಿಗಳ ವರಮಾನಬರುತ್ತದೆ ಎಂದು ಒಂದುಅಂದಾಜನ್ನು ಕೂಡ ಮಾಡಿದ್ದಾರೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ನಮಗೆ ನಿಷ್ಪ್ರಯೋಜಕವಾಗಿರತಕ್ಕ ಈ ಪ್ರೋಪಾಲಿಸಿಯನ್ನು ಕೈಬಿಡದೆ ಮುಂದುವರಿಸಿಕೊಂಡು ಹೋಗುವುದರಲ್ಲಿ ಯಾವ ಕ್ರಮವೂ ಇಲ್ಲ. ಅದಕ್ಕೋಸ್ಕರವಾಗಿ ಸರ್ಕಾರಕ್ಕೆ ಇನ್ನು ಹೆಚ್ಚು ಹಣ ಬೇಕು ಎಂದು ಹೇಳುವ ಪಕ್ಷದಲ್ಲಿ ಇಂಥಾ ಒಂದು ಪ್ರೊಹಿಬಿಷನ್ ಪಾಲಸಿಯನ್ನು ಸ್ಕ್ರಾಪ್ ಮಾಡಿ ಅದರಿಂದ ಬರತಕ್ಕ ವರಮಾನವನ್ನು ದೇಶಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಂಡುಮೂರನೇಪಂಚವಾರ್ಷಿಕಯೋಜನೆಯನ್ನು ಯಶಸ್ವಿಯಾಗಿ ಮಾಡಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನಾನು ಈ ಮಸೂದೆಯನ್ನು ಪೂರ್ಣ ತೀವ್ರವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಮೊದಲನೆಯದಾಗಿ ನನಗೆ 5 ನಿಮಿಷ ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಭೂಕಂದಾಯದ ಮೇಲೆ ಸರ್‌ಛಾರ್ಜ್ ಹಾಕತಕ್ಕ ಬಗ್ಗೆ ತಂದಿರತಕ್ಕ ಈ ಮಸೂದೆಯನ್ನು ಮಾನ್ಯ ರೆವಿನ್ಯೂ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕ ಕಾರಣಗಳು. ವಿಶೇಷವಾಗಿರತಕ್ಕ ಪರಿಸ್ಥಿತಿ, ಈಗಿನ ದೇಶದ ಮುಂದೆ ಇರತಕ್ಕ ಈ ಒಂದು ದೊಡ್ಡ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಸಂದರ್ಭದಲ್ಲಿ ಕೇಂದ್ರದಿಂದ ರಾಜ್ಯಸರ್ಕಾರಕ್ಕೆ ಬರತಕ್ಕ ಹಣದ ಸಹಾಯ ಕಡಿಮೆಯಾಗುತ್ತದೆ ಎಂಬ ಪರಿಸ್ಥಿತಿ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ದೇಶಕ್ಕೆ ಹೆಚ್ಚಿನ ಆದಾಯವನ್ನು ಪಡೆಯತಕ್ಕ ಸಂದರ್ಭದಲ್ಲಿ ರೈತರೂ ಕೂಡ ತಮ್ಮ ಭಾಗದ ನೆರವನ್ನು ಕೊಡಬೇಕು ಎಂದು ಹೇಳಿ ಆ ಉದ್ದೇಶದಿಂದ ಈ ಮಸೂದೆ ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಸ್ವಾಗತಿಸತಕ್ಕ ಸಂದರ್ಭದಲ್ಲಿ ರೈತನ ಇಂದಿನ ಪರಿಸ್ಥಿತಿ ಮತ್ತು ಮುಂದೆ ಆಗಬಹುದಾದ ಪರಿಸ್ಥಿತಿ ಆ ಸಂದರ್ಭದಲ್ಲಿ ಸರ್ಕಾರ ಕೈಗೊಳ್ಳಬೇಕಾಗಿರತಕ್ಕ ಒಂದೆರಡು ಮುಖ್ಯವಾಗಿರತಕ್ಕ ಕರ್ತವ್ಯದ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಈ ದಿವಸ ಈ ಅವಕಾಶವನ್ನು ತೆಗೆದುಕೊಂಡಿದ್ದೇನೆ. ಮಾನ್ಯ ರೆವಿನ್ಯೂ ಸಚಿವರಿಗೆ ಅನೇಕ ಪರದೇಶಗಳಲ್ಲಿ ತಿರುಗಾಡಿ ಅನುಭವ ಚೆನ್ನಾಗಿದೆ. ಯಾವ ದೇಶದಲ್ಲೇ ಆಗಲೀ ವ್ಯವಸಾಯ ಅಭಿವೃದ್ಧಿ ಹೊಂದಿರುವುದು ಸರ್ಕಾರದ ವಿಶೇಷವಾದ ಒಂದು ರಕ್ಷಣೆಯಿಂದ ಮತ್ತು ಅವರು ಕೊಡತಕ್ಕ ಸವಲತ್ತುಗಳಿಂದ. ಇವುಗಳು ಇಲ್ಲಿ ರೈತರಿಗೆ ಸಿಕ್ಕುತ್ತಾ ಇದ್ದರೂ ಕೂಡ ಬಹಳ ಮುಖ್ಯವಾಗಿರತಕ್ಕ ಒಂದು ಭಾಗದಲ್ಲಿ ರೈತನಿಗೆ ಸರ್ಕಾರದಿಂದ ಸಹಾಯವಾಗಿಲ್ಲ. ಆ ಸಹಾಯವನ್ನು ಕೊಡುವುದಕ್ಕೆ ವಿಚಾರಮಾಡುತ್ತಾ ಇದ್ದೇವೆ. ಅದಷ್ಟು ಜಾಗ್ರತೆ ಕೊಡುತ್ತೇವೆ ಎಂದು ಅನೇಕ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಆಹಾರ ಮಂತ್ರಿ ಎಸ್. ಕೆ. ಪಾಟೀಲ್ ಅವರು ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ನಮ್ಮ ಮಾನ್ಯ ರೆವೆನ್ಯೂ ಸಚಿವರೂ ಕೂಡ ಆಹಾರ ಮಂತ್ರಿಗಳಾಗಿರುವುದರಿಂದ ಆ ವಿಷಯವನ್ನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತಂದರೆ ಅವರು ಅದನ್ನು ತೀವ್ರವಾಗಿ ಪರಿಶೀಲಿಸುತ್ತಾರೆ ಎಂದು ಭಾವಿಸಿದ್ದೇನೆ. ಆ ವಿಷಯ ಏನೆಂದರೆ, ಯುದ್ಧದ ವಿಶೇಷ ಪರಿಸ್ಥಿತಿಯಿಂದ ಧಾರಣೆವಾಸಿಗಳು ಬಹಳ ಹೆಚ್ಚಾಗತಕ್ಕ ಸಂಭವ ಇದೆ. ಅದನ್ನು ತಡೆಯಬೇಕು. ಧಾರಣೆವಾಸಿ ಹೆಚ್ಚಾಗದಂತೆ ನೋಡಿಕೊಳ್ಳಬೇಕೆಂದು ರಾಷ್ಟ್ರಪತಿಗಳು ಮತ್ತು ನಮ್ಮ ಮಂತ್ರಿಗಳು ರಾಷ್ಟ್ರಕ್ಕೆ ಕರೆ ಕೊಟ್ಟಿದ್ದರಿಂದ ಬಹಳ ಮಟ್ಟಿಗೆ ಕಡಿಮೆಯಾಗಿದೆ. ಅದು ಯಾವ ಮಟ್ಟಕ್ಕೆ ಕಡಿಮೆಯಾಗಿದೆ ಎಂದು ವಿಚಾರಮಾಡುವುದಾದರೆ, ರೈತನು ಖರ್ಚುಹಾಕಿ ಭತ್ತ, ರಾಗಿ, ಜೋಳವನ್ನು ಬೆಳೆದಿದ್ದಾನೆ. ಆ ಖರ್ಚು ಕೂಡ ಸಿಕ್ಕದೇ ಇರತಕ್ಕ ಪರಿಸ್ಥಿತಿ ಅಷ್ಟುಮಟ್ಟಿಗೆ ಕಡಿಮೆಯಾಗಿದೆ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ಇವತ್ತು ಭತ್ತ ಕುಯ್ಲು ಆಗುತ್ತಾ ಇದೆ. ನಮ್ಮ ತಾಲ್ಲೂಕಿನಲ್ಲಿ ಭತ್ತ ಪಲ್ಲಾಕ್ಕೆ 25 ರೂಪಾಯಿನಂತೆ ಕೇಳುವವರು ಇಲ್ಲ. ಆಗಲೇ ಹೇಳಿದ ಹಾಗೆ ಕೇಂದ್ರದ ಆಹಾರ ಮಂತ್ರಿಗಳು ಮತ್ತು ಇತರರು ಧಾರಣೆವಾಸಿ ಕಡಿಮೆಮಾಡತಕ್ಕ ಸಂದರ್ಭದಲ್ಲಿ ರೈತನ ಆರ್ಥಿಕ ಸ್ಥಿತಿ, ಅವರ ಖರ್ಚುವೆಚ್ಚ ಗಮನದಲ್ಲಿಟ್ಟುಕೊಂಡು ಧಾರಣೆವಾಸಿ ಇಳಿಸುವುದು ಅಥವಾ ಏರಿಸುವುದು ಮಾಡಲಾಗುತ್ತದೆ ಎಂದು

(ಶ್ರೀ ವಿ. ಮುನಿಯಪ್ಪ)

ಹೇಳಿದ್ದಾರೆ. ಇವತ್ತು ಆ ರಕ್ಷಣೆ ರೈತನಿಗೆ ಸಿಕ್ಕುವ ಹಾಗೆ ಸರಕಾರ ಮಾಡಬೇಕೆಂದು ಮಾನ್ಯ ರೆವಿನ್ಯೂ ಮತ್ತು ಆಹಾರ ಮಂತ್ರಿಗಳಾಗಿರತಕ್ಕವರನ್ನು ಈ ಸಂದರ್ಭದಲ್ಲಿ ಒತ್ತಾಯವಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಇವತ್ತು ಹಾಕಿರತಕ್ಕ ಸರ್ ಛಾರ್ಜ್ ಕೆಲವು ಸದಸ್ಯರು ಹೇಳಿರುವ ಹಾಗೆ ಲ್ಯಾಂಡ್ ರೆವಿನ್ಯೂ ಕೋಡು, ರೆವಿನ್ಯೂ ಮ್ಯಾನ್ಯುಯಲ್ ಯಾವುದೂ ಗಮನದಲ್ಲಿಟ್ಟುಕೊಳ್ಳದೇ ಒಂದು ವಿಶೇಷ ಪರಿಸ್ಥಿತಿಯ ಆಧಾರದಮೇಲೆ ಹೆಚ್ಚು ಹಾಕತಕ್ಕ ಭಾವನೆ ಇದೆ. ನಾಳೆ ರೀಸೆಟ್ಲ್‌ಮೆಂಟ್ ಆದಾಗ, ರೀ ಕ್ಲಾಸಿಫಿಕೇಷನ್ ಫೈನಲೈಸ್ ಆಗಿ fix ಆದಾಗ ಇದು ಅಳತೆಗೋಲು ಆಗಬಾರದು. ಇವತ್ತು ಕೊಡ ತಕ್ಕ ವಿಶೇಷ ತೆರಿಗೆಯನ್ನು ತನ್ನ ಕಷ್ಟ ಪರಿಸ್ಥಿತಿ ಯಲ್ಲೂ ಕೂಡ ದೇಶದ ನೆರವಿಗಾಗಿ ರೈತ ಕೊಡುತ್ತಾನೆ. ಇದನ್ನೇ ಆಧಾರವಾಗಿಟ್ಟುಕೊಂಡು ಈ ಮಟ್ಟದಲ್ಲೇ ರೈತನಿಗೆ ಕಂದಾಯ ಕೊಡತಕ್ಕ ಶಕ್ತಿ ಇದೆ ಎಂದು ಮುಂದೆ ರೀ ಸೆಟ್ಲ್‌ಮೆಂಟ್, ರೀ ಕ್ಲಾಸಿಫಿಕೇಷನ್ ಆದಾಗ ಹೆಚ್ಚಿನ ತೆರಿಗೆ ಹಾಕುವುದಕ್ಕೆ ಅವಕಾಶ ವಾಗಬಾರದು.

ಮೂರನೆಯದಾಗಿ, ಆಹಾರ ವಸ್ತುಗಳ ಧಾರಣೆ ಜಾಸ್ತಿ ಕಡಿಮೆಯಾಗತಕ್ಕ ಸಂದರ್ಭದಲ್ಲಿ ಅವನು ವ್ಯವಸಾಯಕ್ಕೆ ಉಪಯೋಗಿಸುವ ಗೊಬ್ಬರ, ಕಬ್ಬಿಣ, ಕೂಲಿ ವಗೈರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನಮ್ಮ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಗದ್ದೆಗೆ ಬಹಳ ಅಗತ್ಯವಾಗಿ ಬೇಕಾಗಿರತಕ್ಕದ್ದು ಹಿಂಡಿಗೊಬ್ಬರ ಸರ್ಕಾರದವರು ಕೊಡುವುದು ಅಮೋನಿಯಂ ಸಲ್ಫೇಟು ಮತ್ತು ಸೂಪರ್ ಫಾಸ್ಫೇಟು. ಪೇಟೆಯಲ್ಲಿ ಒಂದು ಟನ್ ಹಿಂಡಿ ಗೊಬ್ಬರಕ್ಕೆ 500 ರೂಪಾಯಿಗಳವರೆಗೂ ಡಿಮ್ಯಾಂಡ್ ಮಾಡುತ್ತಾ ಇದ್ದಾರೆ. ಹಿಂದೆ ಸರ್ಕಾರ ಸಹಕಾರ ಸಂಘಗಳ ಮೂಲಕ ಯಾವ ರೀತಿ ಕೊಡುತ್ತಾ ಇದ್ದರೋ ಆ ವ್ಯವಸ್ಥೆ ಈಗ ಸರ್ಕಾರದಲ್ಲಿ ಇಲ್ಲ ಎಂಬುದನ್ನು ಸರ್ಕಾರದವರ ಗಮನಕ್ಕೆ ತರಲು ನಿಂತಿದ್ದೇನೆ. ತಂದಿದ್ದೇನೆ. ರೈತ ಎಷ್ಟೋ ಕಷ್ಟ ಪಟ್ಟಾದರೂ ಬೆಳೆದು ಸರ್ಕಾರದವರಿಗೆ ಸಹಾಯಮಾಡುವ ದೃಷ್ಟಿಯಿಂದ ನೀವು ಕೇಳತಕ್ಕ ತೆರಿಗೆಗಳನ್ನು ಕೊಡುತ್ತಾನೆ. ಆದರೆ ಆ ರೈತನನ್ನು ತಾವು ಮರೆಯಬೇಡಿ. ಮುಂದೆ ದೇಶಕ್ಕೆ ಬೇಕಾಗಿರತಕ್ಕ ಆಹಾರ ಉತ್ಪನ್ನ ವನ್ನು ಇನ್ನು ಅತ್ಯಧಿಕವಾಗಿ ಬೆಳೆಯಲು ಅವನಲ್ಲಿ ಶಕ್ತಿ ಉಳಿಯುವ ರೀತಿಯಲ್ಲಿ ಅವನಿಗೆ ರಕ್ಷಣೆ ಕೊಟ್ಟು ಏನು ಬೇಕಾದರೂ ತೆರಿಗೆ ಹಾಕಿ ಎಂದು ಮತ್ತೊಮ್ಮೆ ಸರ್ಕಾರದವರಲ್ಲಿ ಅರಿಕೆ ಮಾಡಿಕೊಂಡು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

BUSINESS OF THE HOUSE.

MR. SPEAKER (Addressing Sri B. Huche Gowda).—Before you begin, may I suggest that somebody should move a formal amendment to the resolution in view of the acceptance of the report of the Business Advisory Committee, that the time be extended?

Sri B. L. GOWDA (Chellekere).—Sir, I move that the time be extended by one hour.

MR. SPEAKER.—The question is:

"That the time allotted by the Business Advisory Committee for the consideration of the Mysore Land Revenue [Surcharge] (Amendment) Bill, 1962 be extended till the close of the day.

The motion was adopted.

† ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಯಾವ ತತ್ವ, ನೀತಿ ಮತ್ತು ಕಾನೂನು ಕೂಡ ಸರಿ ಅನ್ನುವ ರೀತಿಯಲ್ಲಿ ಇದನ್ನು ತಂದಿಲ್ಲ. ಇದರಲ್ಲಿ ಮುಖ್ಯವಾಗಿ ಎಮರ್ಜೆನ್ಸಿ ಎಂಬ ಒಂದು ಕಾರಣ ಹೇಳಿದ್ದಾರೆ. ಯುದ್ಧ ಬಂದಿದೆ, ಎಮರ್ಜೆನ್ಸಿ ಎನ್ನುವ ಕಾಲದಲ್ಲಿ ಹಾಕಬೇಕೆಂದರೂ ಕೂಡ ಆಹಾರ ಉತ್ಪನ್ನ ಮಾಡಬೇಕೆಂಬುದು ಅಷ್ಟೇ ತುರ್ತು ಪರಿಸ್ಥಿತಿ ಎಂಬುದನ್ನು ಮರೆಯ ಬಾರದು. ಯುದ್ಧದಲ್ಲಿ ಜಯಗಳಿಸುವುದಕ್ಕೆ ಸೈನಿಕರು ಯುದ್ಧ ಮಾಡುವುದು ಎಷ್ಟು ಅವಶ್ಯಕವೋ ರೈತರು ದೇಶದ ಜನತೆಗೆ ಆಹಾರವನ್ನು ಒದಗಿಸುವುದು ಕೂಡ ಅಷ್ಟೇ ಅನಿವಾರ್ಯ, ಅಷ್ಟೆ ಪ್ರಾಮುಖ್ಯವಾದದ್ದು. ಅಂಥಾದ್ದರಲ್ಲಿ ದೇಶದ ಬೆನ್ನುಮೂಳೆ ಅನ್ನಿಸಿಕೊಳ್ಳ ತಕ್ಕ ರೈತರಮೇಲೆ ಈ ಹೊರೆಯನ್ನು 100ಕ್ಕೆ 100 ಭಾಗ ಹೊರಿಸುವುದು ಎಂದರೆ ಇದು ನಿಜವಾಗಿಯೂ ಯಾವ ಒಂದು ನೀತಿಯೂ ಇಲ್ಲದೆ ಇನತಕ್ಕದ್ದು ಸರಿ ಯಲ್ಲ. ಉದಾಹರಣೆಗೆ ರೈತರ ಸ್ಥಿತಿ ಹೇಗಿದೆ ಎಂಬುದನ್ನು ಶ್ರೀಮತಿ ಸುಬ್ಬಮ್ಮನವರು ಚೆನ್ನಾಗಿ ವಿವರಿಸಿದರು. ಅವರ ಅನೇಕ ವ್ಯವಸಾಯದ ಕೆಲಸ ಕಾರ್ಯಗಳಿಗೆ ತೆಗೆದುಕೊಂಡಿರತಕ್ಕ ಸಾಲಗಳನ್ನು ಇನ್ನೂ ಕೂಡ ತೀರಿಸುತ್ತಾ ಇಲ್ಲ. ಈಗಿರತಕ್ಕ ಕಂದಾಯವನ್ನೇ ಸರಿಯಾಗಿ ಪಾವತಿ ಮಾಡದೆ ಡೀಫಾಲ್ಟರ್ಸ್ ಆಗುತ್ತಾ ಇದ್ದಾರೆ. ಅಲ್ಲದೆ ಕಂದಾಯಕ್ಕೆ ಶೇಕಡ 35 ರಷ್ಟು ಸೆಸ್ಸು ಇದೆ. ಮೊನ್ನೆ ಒಂದಾಣೆ ಸೆಸ್ಸು ಹೆಚ್ಚು ಮಾಡುವುದಕ್ಕೂ ಕೂಡ ತೀವ್ರ ವಿರೋಧ ದೇಶದಲ್ಲಿ ಬಂತು. ಹೀಗಿರುವಾಗ 16 ಆಣೆಗೆ 16 ಆಣೆ ಹೆಚ್ಚುಮಾಡಿದರೆ ಎಷ್ಟರಮಟ್ಟಿಗೆ ಅವರ ಮೂಳೆ ಮುರಿದುಹೋಗುತ್ತದೆ ಎಂಬುದನ್ನು ಈಗಾಗಲೇ ಮಾನ್ಯ ಸದಸ್ಯರು ಪ್ರತಿಯೊಬ್ಬರೂ ವಿವರಿಸಿದ್ದಾರೆ. ಯಾವ ಕೆಲಸ ಮಾಡಿದರೂ ರೈತರಿಗೆ ಈಗ ಹೊಟ್ಟೆತುಂಬ ಸಿಕ್ಕುತ್ತಾ ಇಲ್ಲ. ಈ ವರ್ಷ ಮುಂಗಾರು ಮಳೆ ಬಾರದೆ ಹೋಯಿತು. ಈಚೆಗೆ ಮಳೆ ಬಿದ್ದು ಕಾಳೆಲ್ಲಾ ಕೆಟ್ಟುಹೋಯಿತು. 10 ಪಲ್ಲಾ ಬೆಳೆದವನಿಗೆ 5 ಪಲ್ಲಾ ಸಿಕ್ಕುವುದು ಕಷ್ಟವಾಗಿದೆ,